# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಭಾನುವಾರ, ಮಾರ್ಚ್ 06, 2022

ಸಂಪುಟ : 48 ಸಂಚಿಕೆ : 295 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com




## ಉಕ್ರೇನ್‌ನಿಂದ ಬಂದ ವಿದ್ಯಾರ್ಥಿಗಳನ್ನು ಭೇಟಿ ಮಾಡಿದ ಸಂಸದ ಸಿದ್ದೇಶ್ವರ

**ಉಳಿದವರನ್ನೂ ಸುರಕ್ಷಿತವಾಗಿ ಕರೆ ತರಲು ವಿದೇಶಾಂಗ ಸಚಿವರ ಜೊತೆ ಮಾತುಕತೆ - ಸಂಸದ ಸಿದ್ದೇಶ್ವರ ಭರವಸೆ**

ದಾವಣಗೆರೆ, ಮಾ.5- ವೈದ್ಯಕೀಯ ಶಿಕ್ಷಣ ಪಡೆಯಲು ತೆರಳಿ ಇದೀಗ ಯುದ್ಧದ ಹಿನ್ನೆಲೆಯಲ್ಲಿ ಉಕ್ರೇನ್‌ನಿಂದ ವಾಪಾಸ್ಸಾದ ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ ನೀಡಿದ ಸಂಸದ ಜಿ.ಎಂ. ಸಿದ್ದೇಶ್ವರ್, ಪೋಷಕರು ಮತ್ತು ವಿದ್ಯಾರ್ಥಿಗಳ ಯೋಗಕ್ಷೇಮ ವಿಚಾರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಸದರು, ಈಗಾಗಲೇ ಜಿಲ್ಲೆಯ ಕೆಲ ವಿದ್ಯಾರ್ಥಿಗಳು ಸುರಕ್ಷಿತವಾಗಿ ಮರಳಿದ್ದು, ಉಳಿದವರನ್ನು ಕರೆತರಲು ವಿದೇಶಾಂಗ ಸಚಿವರ ಜೊತೆಗೆ ನಿರಂತರವಾಗಿ ಮಾತುಕತೆ ನಡೆಸುತ್ತಿರುವುದಾಗಿ ಹೇಳಿದರು.

ಯುದ್ಧಪೀಡಿತ ಉಕ್ರೇನ್ ದೇಶದ ವಿವಿಧ ನಗರಗಳಲ್ಲಿರುವ ಭಾರತೀಯರನ್ನು ತೆರವುಗೊಳಿಸುವ ಬಗ್ಗೆ ಭಾರತದ ವಿದೇಶಾಂಗ ಸಚಿವಾಲಯ ಅಧಿಕಾರಿಗಳು ಉಕ್ರೇನ್ ಹಾಗೂ ರಷ್ಯಾ ಎರಡೂ ದೇಶಗಳ ಅಧಿಕಾರಿಗಳ ಸಂಪರ್ಕದಲ್ಲಿದ್ದಾರೆ, ಉಕ್ರೇನ್‌ನಿಂದ ವಾಪಸ್ಸಾದ ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸದ ಬಗ್ಗೆ ನಮ್ಮ ಸರ್ಕಾರ ಚಿಂತನೆ ನಡೆಸುತ್ತಿದೆ. ಹೀಗಾಗಿ ವಿದ್ಯಾರ್ಥಿಗಳು ಆತಂಕ ಪಡದೇ ಧೈರ್ಯವಾಗಿರಿ ಎಂದು ಸಿದ್ದೇಶ್ವರ ಹೇಳಿದರು.

ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಮಾತನಾಡಿ, ಭಾರತ ಸರ್ಕಾರ ತನ್ನ ಸ್ವಂತ ಖರ್ಚಿನಲ್ಲಿ ಬಸ್, ವಿಮಾನ, ರೈಲುಗಳ ಮೂಲಕ ವಿದ್ಯಾರ್ಥಿಗಳನ್ನು ಮರಳಿ ಭಾರತಕ್ಕೆ ಕರೆತರುತ್ತಿದೆ. ಉಳಿದ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಕರೆತರುವ ಪ್ರಯತ್ನ ನಡೆಯುತ್ತಿದ್ದು, ಪೋಷಕರು ಧೈರ್ಯವಾಗಿರಬೇಕು ಎಂದರು.

ಉಕ್ರೇನ್‌ನಿಂದ ವಾಪಸ್ಸಾದ ವಿದ್ಯಾರ್ಥಿಗಳಾದ ಸಂಜಯ್‌ಕುಮಾರ್, ಸಯ್ಯದ್ ಹಬೀಬಾ ಹಾಗೂ ವಿನಯ್ ಕಲ್ಲಿಹಾಳ್ ಮಾತನಾಡಿ, ಉಕ್ರೇನ್ ತೊರೆಯುವಂತೆ ವಿದ್ಯಾರ್ಥಿಗಳಿಗೆ (2ನೇ ಪುಟಕ್ಕೆ)

# ಪಿಸೊಚಿನ್‌ನಲ್ಲಿದ್ದ ಎಲ್ಲ ವಿದ್ಯಾರ್ಥಿಗಳ ರಕ್ಷಣೆ





**ಬಹುತೇಕ ವೈದ್ಯಕೀಯ ವಿದ್ಯಾರ್ಥಿಗಳು ಕರ್ನಾಟಕ ಮೂಲದವರು**

ನವದೆಹಲಿ, ಮಾ. 5 – ಸಮರ ಪೀಡಿತ ಉಕ್ರೇನ್‌ನ ಪಿಸೊಚಿನ್ ನಗರದಲ್ಲಿ ಅತಂತ್ರರಾಗಿದ್ದ ಎಲ್ಲಾ ಭಾರತೀಯರನ್ನು ರಕ್ಷಿಸಲಾಗಿದೆ. ಇಲ್ಲಿರುವ ಎಲ್ಲರನ್ನೂ ಬಸ್ ಮೂಲಕ ಲೆವಿವ್ ನಗರದ ಕಡೆ ಕರೆ ತರಲಾಗುತ್ತಿದೆ.

ಉಕ್ರೇನ್‌ನಲ್ಲಿರುವ ಭಾರತದ ರಾಯಭಾರಿ ಕಚೇರಿ ಈ ಬಗ್ಗೆ ಹೇಳಿಕೆ ನೀಡಿದ್ದು, ಪಿಸೊಚಿನ್ ನಗರದಲ್ಲಿರುವ ಎಲ್ಲಾ ಭಾರತೀಯರನ್ನು ತೆರವುಗೊಳಿಸಲಾಗಿದೆ ಎಂದು ಹೇಳಿದೆ.

ಖಾರ್ಕೀವ್ ನಗರದಲ್ಲಿರುವ ಭಾರತೀಯರು ತಕ್ಷಣವೇ ಅಲ್ಲಿಂದ ಹೊರ ಬರುವಂತೆ ಕಳೆದ ಬುಧವಾರ ರಾಯಭಾರಿ ಕಚೇರಿ ಸೂಚನೆ ನೀಡಿತ್ತು. ನಂತರದಲ್ಲಿ ಸಾಕಷ್ಟು ವಿದ್ಯಾರ್ಥಿಗಳು ಪಿಸೊಚಿನ್ ನಗರಕ್ಕೆ ತೆರಳಿದ್ದರು. ಆದರೆ, ಅಲ್ಲಿ ನೂರಾರು ವಿದ್ಯಾರ್ಥಿಗಳು ಆಹಾರ ಹಾಗೂ ನೀರಿಲ್ಲದೇ ಪರದಾಡುವ ಪರಿಸ್ಥಿತಿ ಉಂಟಾಗಿತ್ತು. ತಮಗೆ ನೆರವು ನೀಡುವಂತೆ ವಿದ್ಯಾರ್ಥಿಗಳು ಮೊರೆ ಇಟ್ಟಿದ್ದರು.

ವಿದ್ಯಾರ್ಥಿಗಳಿಗೆ ಬಸ್ ವ್ಯವಸ್ಥೆ ಮಾಡಿದ ನಂತರ ಹೇಳಿಕೆ ನೀಡಿರುವ ರಾಯಭಾರಿ ಕಚೇರಿ, ವಿದ್ಯಾರ್ಥಿಗಳ ಪ್ರಯಾಣದ ಉದ್ದಕ್ಕೂ ಅವರ ಸಂಪರ್ಕದಲ್ಲಿರುತ್ತೇವೆ. ಅವರ ಸುರಕ್ಷತೆ ಸದಾ ನಮ್ಮ ಆದ್ಯತೆ ಎಂದು ಹೇಳಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕರ್ನಾಟಕದ ಆರೋಗ್ಯ ಸಚಿವ ಡಾ. ಕೆ. ಸುಧಾಕರ್, ಪಿಸೊಚಿನ್ ನಗರದಲ್ಲಿದ್ದ 289 ವೈದ್ಯಕೀಯ ವಿದ್ಯಾರ್ಥಿಗಳು ಬಸ್ ಏರಿದ್ದು, ಇವರಲ್ಲಿ ಬಹುತೇಕರು ಕರ್ನಾಟಕದವರು ಎಂದಿದ್ದಾರೆ.

ಹತ್ತು ದಿನಗಳ ಸಂಕಷ್ಟದ ನಂತರ ಪಿಸೊಚಿನ್ ಹಾಗೂ ಖಾರ್ಕೀವ್‌ನ ವಿದ್ಯಾರ್ಥಿಗಳು ಸುರಕ್ಷಿತವಾಗಿದ್ದಾರೆ. ಇವರನ್ನು ಪೊಲ್ಯಾಂಡ್ ಗಡಿ ಬಳಿ ಇರುವ ಲೆವಿವ್ ನಗರಕ್ಕೆ ಕರೆ ತರಲಾಗುತ್ತಿದೆ. ಭಾರತದ ರಾಯಭಾರಿ ಕಚೇರಿ ಈ ಬಗ್ಗೆ ವ್ಯವಸ್ಥೆ ಮಾಡಿದ್ದು, ಅಭಿನಂದಿಸುವುದಾಗಿ ಸುಧಾಕರ್ ತಿಳಿಸಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ವಿದೇಶಾಂಗ ವ್ಯವಹಾರಗಳ ಸಚಿವಾಲಯ, ಉಕ್ರೇನ್ ತೆರವುಗೊಳಿಸಲು ಮೊದಲು ಸಲಹೆ ನೀಡಿದ ನಂತರ 20 ಸಾವಿರಕ್ಕೂ ಹೆಚ್ಚು ಭಾರತೀಯರು ಅಲ್ಲಿಂದ ಹೊರ ಬಂದಿದ್ದಾರೆ ಎಂದು ಹೇಳಿದೆ.

ಪಿಸೊಚಿನ್‌ನಿಂದ ವಿದ್ಯಾರ್ಥಿಗಳನ್ನು ರಕ್ಷಿಸಲಾಗಿದೆಯಾದರೂ, ಸುಮಿಯಲ್ಲಿರುವ 700ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅತಂತ್ರರಾಗಿದ್ದಾರೆ. ಕಡು ಚಳಿಯಲ್ಲಿ ಆಹಾರ ಸಿಗದೇ ವಿದ್ಯಾರ್ಥಿಗಳ ಸಂಕಷ್ಟ ಮುಂದುವರೆದಿದ್ದು, ನೆರವಿಗಾಗಿ ಮೊರೆ ಇಟ್ಟಿದ್ದಾರೆ.

ವಿದ್ಯಾರ್ಥಿಗಳು ಅನಗತ್ಯ ಅಪಾಯ ತಂದುಕೊಳ್ಳಬಾರದು. ತಮ್ಮ ನೆಲೆಯಲ್ಲೇ ಇರಬೇಕು. ವಿದ್ಯಾರ್ಥಿಗಳಿಗೆ ಸುರಕ್ಷಿತ ಕಾರಿಡಾರ್ ಕಲ್ಪಿಸಲಾಗುವುದು ಎಂದು (2ನೇ ಪುಟಕ್ಕೆ)

## ಕೊರೊನಾ ಇಳಿಕೆ, ಬೇಸಿಗೆ ರೋಗಗಳತ್ತ ಗಮನ

### ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಉಮಾಶಂಕರ್



ದಾವಣಗೆರೆ, ಮಾ. 5 – ಜಿಲ್ಲೆಯಲ್ಲಿ ಕೊರೊನಾ ಮೂರನೇ ಅಲೆ ತೀವ್ರತೆ ಕಡಿಮೆಯಾಗಿದ್ದು, ಕಳೆದ ವಾರದಲ್ಲಿ ಪಾಸಿಟಿವಿಟಿ ದರ ಶೇ.0.31ಕ್ಕೆ ಇಳಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳೂ ಆಗಿರುವ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ನಡೆಸಲಾದ ಕೊರೊನಾ ತಡೆ ಹಾಗೂ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ವಿವರ ನೀಡಿರುವ ಅಧಿಕಾರಿಗಳು, ಪ್ರತಿದಿನ 800ಕ್ಕೂ ಹೆಚ್ಚು ಟೆಸ್ಟ್‌ಗಳನ್ನು ಕೈಗೊಳ್ಳಲಾಗುತ್ತಿದ್ದರೂ ಹೆಚ್ಚು (2ನೇ ಪುಟಕ್ಕೆ)

**ಪೂರಕ ಕೃಷಿ, ಎಫ್.ಪಿ.ಒ.ಗೆ ಒತ್ತು**

**ರೈತರಿಗೆ ಆದಾಯ ಹೆಚ್ಚಬೇಕಾದರೆ ಪೂರಕ ಕೃಷಿಗೆ ಒತ್ತು ನೀಡಬೇಕು. ಇಳುವರಿಯ ಮೌಲ್ಯ ವರ್ಧನೆ, ಸಂಸ್ಕರಣೆ ರೈತರ ಮೂಲಕವೇ ಆಗಬೇಕು. ತ್ಯಾಜ್ಯದಿಂದಲೂ ಉತ್ಪನ್ನ ಬಳಕೆ ಸಾಧ್ಯವಾಗಬೇಕು. ಒಳನಾಡ ಮೀನುಗಾರಿಕೆಗೆ ಉತ್ತೇಜನ ನೀಡಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಉಮಾಶಂಕರ್ ತಿಳಿಸಿದ್ದಾರೆ. ಎಫ್.ಪಿ.ಒ.ಗಳಿಂದ ಸಾವಿರಾರು ರೈತರಿಗೆ ಅನುಕೂಲವಾಗುತ್ತದೆ. ಹೀಗಾಗಿ ಎಫ್.ಪಿ.ಒ.ಗಳು ಲಾಭದಾಯಕವಾಗುವಂತೆ ಮಾಡಲು ಒತ್ತು ನೀಡಬೇಕಿದೆ. ಕೇಂದ್ರ ಸರ್ಕಾರ ಸಹ ಎಫ್.ಪಿ.ಒ.ಗಳಿಗೆ ಹೆಚ್ಚು ಉತ್ತೇಜನ ನೀಡುತ್ತಿದೆ ಎಂದರು.**

## ಪ್ರಜಾಪ್ರಭುತ್ವ ವ್ಯವಸ್ಥೆಗೆ ಕಂಟಕ : ಶಾಸಕ ವಿಶ್ವನಾಥ್

ದಾವಣಗೆರೆ, ಮಾ.5- ಹಣಬಲ, ರಾಜಕೀಯ ಬಲ ಎರಡೂ ಸೇರಿದರೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಕಂಟಕ ಎಂದು ಮಹಾನ್ ಜನನಾಯಕ ನೆಹರು ಅವರು ಹೇಳಿದ ಮಾತು ಪ್ರಸ್ತುತ ಸತ್ಯವಾಗಿದ್ದು, ಅಂತಹ ಸ್ಥಿತಿ ಜನತಂತ್ರ ವ್ಯವಸ್ಥೆಯಲ್ಲಿ ನಿರ್ಮಾಣವಾಗಿರುವುದಾಗಿ ಮಾಜಿ ಸಚಿವರೂ ಆದ ವಿಧಾನ ಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ತಿಳಿಸಿದರು.

ನಗರದ ಕುವೆಂಪು ಭವನದಲ್ಲಿ ಇಂದು ನಡೆದ ಕಾರ್ಯಕ್ರಮದ ವೇಳೆ ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾವೂ ಸಹ ರಾಜಕೀಯ ಪ್ರವೇಶಕ್ಕೆ ಸ್ಪರ್ಧಿಸಲು ಅನುವು ಮಾಡಿಕೊಡುವಂತೆ ಟಾಟಾ, ಬಿರ್ಲಾರಂತಹ ಉದ್ಯಮಿಗಳು ತಮ್ಮ ಬಳಿ (2ನೇ ಪುಟಕ್ಕೆ)

## ವ್ಯವಸ್ಥೆಯ ಪರಿಶೀಲನೆ ಅಗತ್ಯ

### ಚಳಗೇರಿಯ ನವೀನ್ ಪಾಲಕರಿಗೆ 25 ಲಕ್ಷ ರೂಗಳ ಚೆಕ್ ವಿತರಿಸಿ ಸಾಂತ್ವನ ಹೇಳಿದ ಸಿಎಂ ಬೊಮ್ಮಾಯಿ




ರಾಣೇಬೆನ್ನೂರು, ಮಾ.5- ಮೆರಿಟ್ ಇದ್ದರೂ ಮೆಡಿಕಲ್ ಅಥವಾ ಬೇರಾವುದೇ ಕೋರ್ಸ್ ಸೇರಲು ಅವಕಾಶ ಕಡಿಮೆ ಎನ್ನುವುದು ನವೀನ್ ಸಾವು ಹಾಗೂ ಇತ್ತೀಚಿನ ಘಟನೆಗಳಿಂದ ತಿಳಿಯುತ್ತಿದೆ. ಈ ವ್ಯವಸ್ಥೆ ಬಗ್ಗೆ ಚಿಂತನೆ ನಡೆಯಬೇಕಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ರಷ್ಯಾ-ಉಕ್ರೇನ್ ಸಂಘರ್ಷದಲ್ಲಿ ಸಾವನ್ನಪ್ಪಿದ ಚಳಗೇರಿಯ ನವೀನ್ ಪಾಲಕರಿಗೆ 25 ಲಕ್ಷ ರೂ. ಪರಿಹಾರದ ಚೆಕ್ ನೀಡಿ ಅವರು ಪತ್ರಕರ್ತರೊಂದಿಗೆ ಮಾತನಾಡಿದರು.

ವ್ಯವಸ್ಥೆಯ ಪುನರ್ ಪರಿಶೀಲನೆ ಆಗಬೇಕಿದೆ. ಈ ಕುರಿತು ಕೇಂದ್ರದಲ್ಲಿ ಉನ್ನತ ಮಟ್ಟದ ಚರ್ಚೆ ನಡೆಯುತ್ತಿದೆ. ನಾವು ಕೂಡ ರಾಜ್ಯದಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ಸಚಿವರು ಸೇರಿ ಸಭೆ ಮಾಡಲಿದ್ದೇವೆ. ಓದಿಗೆ ನಾವು ಧನ ಸಹಾಯ ಮಾಡಬಹುದು. ಆದರೆ ಸೀಟ್ ಹಂಚಿಕೆ ಮುಂತಾದವು ಕೇಂದ್ರದಿಂದ ಆಗಬೇಕಿದೆ. (3ನೇ ಪುಟಕ್ಕೆ)

## ಜಲವಿವಾದ ಕಾಯ್ದೆಗೆ ಸಂಪೂರ್ಣ ತಿದ್ದುಪಡಿ ಅಗತ್ಯ



ಬೆಂಗಳೂರು, ಮಾ. 5 - ಅಂತರ್‌ರಾಜ್ಯ ಜಲವಿವಾದ ಕಾಯ್ದೆಯನ್ನು ಸಂಪೂರ್ಣವಾಗಿ ತಿದ್ದುಪಡಿ ಮಾಡುವ ಅಗತ್ಯವಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ *ಜಲ ಜೀವನ್ ಮಿಷನ್ ಹಾಗೂ ಸ್ವಚ್ಛ ಭಾರತ್ ಮಿಷನ್ (ಗ್ರಾಮ) ಯೋಜನೆಗಳ ಕುರಿತಂತೆ ದಕ್ಷಿಣ ಭಾರತದ ರಾಜ್ಯಗಳ ಪ್ರಾದೇಶಿಕ (2ನೇ ಪುಟಕ್ಕೆ)

## ಜೂನ್‌ನಲ್ಲಿ ನಾಲ್ಕನೇ ಅಲೆ ಎಂಬ ಅಧ್ಯಯನ ಪ್ರಶ್ನಿಸಿದ ವಿಜ್ಞಾನಿಗಳು

ನವದೆಹಲಿ, ಮಾ. 5 – ಜೂನ್ ತಿಂಗಳಲ್ಲಿ ಕೊರೊನಾ ನಾಲ್ಕನೇ ಅಲೆ ಬರಲಿದೆ ಎಂದು ಐ.ಐ.ಟಿ. - ಕಾನ್‌ಪುರದ ಅಧ್ಯಯನ ತಿಳಿಸಿರುವುದನ್ನು ಹಲವಾರು ವಿಜ್ಞಾನಿಗಳು ಪ್ರಶ್ನಿಸಿದ್ದು, ಇದು ಕೇವಲ ಊಹೆ ಆಧಾರಿತ ಎಂದಿದ್ದಾರೆ.

ಮುಂದಿನ ಮೂರು ತಿಂಗಳಲ್ಲಿ ಕೊರೊನಾದ ಮತ್ತೊಂದು ಅಲೆ ಬರಬಹುದು ಎಂಬ ಆತಂಕ ತಳ್ಳಿ ಹಾಕಿರುವ ವಿಜ್ಞಾನಿಗಳು, ದೇಶದ ಬಹುತೇಕರು ಎರಡು ಡೋಸ್ ಲಸಿಕೆ ಪಡೆದಿದ್ದಾರೆ ಹಾಗೂ ನೈಸರ್ಗಿಕ ಸೋಂಕಿಗೆ ಒಳಗಾಗಿದ್ದಾರೆ. ಹೊಸ ರೂಪಾಂತರಿ (3ನೇ ಪುಟಕ್ಕೆ)







**ಪ್ರಥಮ ವರ್ಷದ ಪುಣ್ಯಸ್ಮರಣೆ**



ದಾವಣಗೆರೆ ನಗರ, ಎಂ.ಸಿ.ಸಿ. 'ಎ' ಬ್ಲಾಕ್ ವಾಸಿ
ಶಾಮನೂರು ದಿ|| ಬಿಂದಪ್ಪ ಸಿದ್ದಪ್ಪನವರ ಧರ್ಮಪತ್ನಿ

**ಲಿಂ. ಸುಲೋಚನಮ್ಮ ಬಿಂದಪ್ಪ ಸಿದ್ದಪ್ಪ**

ಇವರು ಶಿವೈಕ್ಯರಾಗಿ ಇಂದಿಗೆ ಒಂದು ವರ್ಷವಾಯಿತು.
ಸದಾ ಅವರ ಆದರ್ಶ, ಮಾರ್ಗದರ್ಶನಗಳ ಸ್ಮರಣೆಯಲ್ಲಿರುವ

ಸಹೋದರರಾದ: ಕೆ.ಜಿ. ಬಸವನಗೌಡ್ರು, ಜಿ.ಪಂ. ಮಾಜಿ ಸದಸ್ಯರು, ಕಕ್ಕರಗೊಳ್ಳ.
ಮತ್ತು ಸಹೋದರರು, ಸಹೋದರಿಯರು ಹಾಗೂ ಮಕ್ಕಳು
ಶ್ರೀಮತಿ ಮಹಾಲಕ್ಷ್ಮಿ ಶ್ರೀ ಕೆ.ಜಿ. ವೀರಬಸಪ್ಪ, ಶ್ರೀಮತಿ ಸ್ಮಿತಾ ಶ್ರೀ ಜಿ.ವಿ. ಸುಚಿತ್
ಪುಟಾಣಿಗಳಾದ: ದಿಶಾ, ತಸ್ವಿ
ಬಿಂದಪ್ಪ ಮನೆತನದವರು, ಶಾಮನೂರು ಹಾಗೂ ಗೌಡ್ರು ಮನೆತನದವರು, ಕಕ್ಕರಗೊಳ್ಳ.
ಫೋ. : 99025 69999, 08192 226321

# ವಾಲ್ಮೀಕಿ ಶ್ರೀಗಳ ಹೋರಾಟಕ್ಕೆ ಕಾಂಗ್ರೆಸ್ ಮುಖಂಡರ ಬೆಂಬಲ



ದಾವಣಗೆರೆ, ಮಾ.5- ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ.3 ರಿಂದ ಶೇ. 7.5ಕ್ಕೆ ಹೆಚ್ಚಿಸುವಂತೆ ಒತ್ತಾಯಿಸಿ, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರುಪೀಠದ ಶ್ರೀಗಳಾದ ಪ್ರಸನ್ನಾನಂದ ಸ್ವಾಮೀಜಿ ನಡೆಸುತ್ತಿರುವ ಧರಣಿ ಸತ್ಯಾಗ್ರಹ ಸ್ಥಳಕ್ಕೆ ಭೇಟಿ ನೀಡಿದ ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಮುಖಂಡರುಗಳಾದ ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ರಾಜ್ಯ ಅಲ್ಪ ಸಂಖ್ಯಾತರ ಆಯೋಗದ ಮಾಜಿ ಅಧ್ಯಕ್ಷ ಸೈಯದ್ ಸೈಫುಲ್ಲಾ, ದಾವಣಗೆರೆ ಮಹಾನಗರ ಪಾಲಿಕೆ ಸದಸ್ಯರುಗಳಾದ ಕೆ. ಚಮನ್ ಸಾಬ್, ಗಡಿಗುಡಾಳ್ ಮಂಜುನಾಥ ಗೌಡ, ಕಾಂಗ್ರೆಸ್ ಮುಖಂಡರುಗಳಾದ ಜಿ.ಹೆಚ್. ಜಯರಾಮಯ್ಯ ಹಾಗೂ ಟಿ. ಕುಮಾರ್ ಅವರುಗಳು ಶ್ರೀಗಳಿಗೆ ಸನ್ಮಾನಿಸಿ, ತಮ್ಮ ಹೋರಾಟಕ್ಕೆ ಕಾಂಗ್ರೆಸ್ ಪಕ್ಷದ ಬೆಂಬಲವಿದೆ ಎಂದು ಘೋಷಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡರು ಜಿಲ್ಲಾ ಕಾಂಗ್ರೆಸ್ ನಾಯಕರಾದ ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷವು ತಮ್ಮ ನ್ಯಾಯಯುತ ಹೋರಾಟಕ್ಕೆ ಹೋರಾಡಲು ಸಿದ್ಧ ಎಂದು ಘೋಷಿಸಿದರು.

# ಫುಟ್‌ಬಾಲ್ ಗತವೈಭವ ನಗರದಲ್ಲಿ ಮತ್ತೆ ಮರುಕಳಿಸಲಿ : ದಿನೇಶ್ ಶೆಟ್ಟಿ




ದಾವಣಗೆರೆ, ಮಾ. 5- ಹಿಂದೊಮ್ಮೆ ದಾವಣಗೆರೆಯಲ್ಲಿ ಫುಟ್‌ಬಾಲ್ ಆಟ ಎಂದರೆ ಹಬ್ಬ ಆಚರಿಸಿದಂತೆ ಆಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಫುಟ್‌ಬಾಲ್ ಆಟ ಇಲ್ಲದಂತಾಗಿದ್ದು, ಫುಟ್‌ಬಾಲ್ ಪೇಕ್ಷಕರು ನಿರಾಸೆ ಪಡುವಂತಾಗಿತ್ತು. ಮತ್ತೊಮ್ಮೆ ಫುಟ್‌ಬಾಲ್ ಗತವೈಭವ ದಾವಣಗೆರೆಯಲ್ಲಿ ಮತ್ತೆ ಮರುಕಳಿಸಲಿ ಎಂದು ಜಿಲ್ಲಾ ಫುಟ್‌ಬಾಲ್ ಅಸೋಸಿಯೇಷನ್ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಆಶಿಸಿದರು.

ಜಿಲ್ಲಾ ಫುಟ್‌ಬಾಲ್ ಅಸೋಸಿಯೇಷನ್‌ನ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಕೊರೊನಾದಿಂದಾಗಿ ಯಾವುದೇ ಕ್ರೀಡಾ ಚಟುವಟಿಕೆಗಳಿಲ್ಲದೇ ಆಟಗಾರರು ಮತ್ತು ಪ್ರೇಕ್ಷಕರಿಗೆ ತೊಂದರೆ ಆಗಿದ್ದು, ಇನ್ನು ಮುಂದೆ ಕ್ರೀಡಾ ಚಟುವಟಿಕೆಗಳನ್ನು ಆರಂಭಿಸಲಾಗುವುದು ಎಂದರು.

ಎಸ್.ಎಸ್. ಗಿರೀಶ್, ತರಬೇತುದಾರ ಮುಸ್ತು ಮಾತನಾಡಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ರಫೀ, ಗೌಸ್, ಪ್ರವೀಣ್, ವೀರೇಶ್,ಕೃಷ್ಣ ಜಾಧವ್, ಸಂಜೀವ್, ಪ್ರವೀಣ್, ನೂರ್ ಅಹ್ಮದ್, ಅಜೇಯ್, ರಮೇಶ್, ಸಂದೇಶ್, ಖಾದರ್, ಇಲೂ, ಅಲ್ಲಾಭಕ್ಷಿ, ಹಿರಿಯ-ಕಿರಿಯ ಆಟಗಾರರಿದ್ದರು.

# ಚುನಾವಣೆ ದೃಷ್ಟಿಕೋನದ ಬಜೆಟ್



ಹರಪನಹಳ್ಳಿ, ಮಾ.5- ಸಿ.ಎಂ. ಬಸವರಾಜ್ ಬೊಮ್ಮಾಯಿ ಅವರು ಮಂಡಿಸಿರುವ 2022-23 ನೇ ಸಾಲಿನ ಬಜೆಟ್ ಕೇವಲ ಚುನಾವಣೆ ದೃಷ್ಟಿಕೋನದ ಬಜೆಟ್ ಆಗಿದೆ ಎಂದು ಕೆಪಿಸಿಸಿ ಮಾಧ್ಯಮ ವಿಶ್ಲೇಷಕ ರಾದ ಎಂ.ಪಿ. ವೀಣಾ ಮಹಾಂತೇಶ್ ಹೇಳಿದರು.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಆರ್ಥಿಕ ವರ್ಷದ ಬಜೆಟ್‌ನಲ್ಲಿ ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗಕ್ಕೆ ಒತ್ತು ನೀಡಿಲ್ಲ. ಹಲವಾರು ವರ್ಷಗಳಿಂದ ಹೋರಾಟ ಮಾಡುತ್ತಾ ಬಂದಿರುವ ನೌಕರರ ಬೇಡಿಕೆ ಈಡೇರಿಲ್ಲ. ಅವರ ಮಾಸಿಕ ಗೌರವ ಧನ ಹೆಚ್ಚಳ ಮಾಡಿಲ್ಲ. ಕೋವಿಡ್ ನಂತರ ರಾಜ್ಯದಲ್ಲಿ ನಿರುದ್ಯೋಗ ತಾಂಡವವಾಡುತ್ತಿದ್ದು, ಉದ್ಯೋಗ ಕಳೆದು ಕೊಂಡಿರುವ ಅಸಂಖ್ಯಾತ ಜನರಿಗೆ ಹೊಸದಾಗಿ ಉದ್ಯೋಗಾವಕಾಶ ಆಗುತ್ತಿಲ್ಲ. ಇಂತಹ ಸಂಕಷ್ಟ ಕಾಲದಲ್ಲೂ ಆದಾಯ ನಿರೀಕ್ಷೆ ಮಾಡಿದ್ದಾರೆ ಎಂದು ಟೀಕಿಸಿದರು.

# ಜೂನ್‌ನಲ್ಲಿ ನಾಲ್ಕನೇ ಅಲೆ ಎಂಬ ಅಧ್ಯಯನ ಪ್ರಶ್ನಿಸಿದ ವಿಜ್ಞಾನಿಗಳು

**(1ನೇ ಪುಟದಿಂದ)** ಬರದ ಹೊರತು, ಇನ್ನೊಂದು ಅಲೆ ಬಂದರೂ ಆಸ್ಪತ್ರೆಗೆ ದಾಖಲಾಗುವವರ ಹಾಗೂ ಸಾವನ್ನಪ್ಪುವವರ ಸಂಖ್ಯೆ ಕಡಿಮೆ ಇರುತ್ತದೆ ಎಂದವರು ಹೇಳಿದ್ದಾರೆ.

ಐ.ಐ.ಟಿ. - ಕಾನ್‌ಪುರದ ಸಂಶೋಧಕರು ಇತ್ತೀಚೆಗೆ ವರದಿಯೊಂದನ್ನು ಪ್ರಕಟಿಸಿ ಜೂನ್ 22ರ ವೇಳೆಗೆ ದೇಶದಲ್ಲಿ ನಾಲ್ಕನೇ ಅಲೆ ಆರಂಭವಾಗಿ, ಆಗಸ್ಟ್ ಮಧ್ಯ ಭಾಗದ ವೇಳೆ ಉತ್ತುಂಗಕ್ಕೆ ತಲುಪಲಿದೆ ಎಂದಿದ್ದರು.

ಯಾವುದೇ ಮಾದರಿ ಮುಂದಿನ ತಿಂಗಳುಗಳಲ್ಲಿ ಬರುವ ಕೊರೊನಾ ಅಲೆಯನ್ನು ನಿಖರವಾಗಿ ಊಹಿಸಲಾಗದು ಎಂದು ಹರಿಯಾಣದ ಅಶೋಕ ವಿಶ್ವವಿದ್ಯಾನಿಲಯದ ಉಪನ್ಯಾಸಕರಾದ ಗೌತಮ್ ಮೆನನ್ ಹೇಳಿದ್ದಾರೆ.

ಯಾವಾಗ ಹೊಸ ರೂಪಾಂತರಿ ಬರಲಿದೆ ಎಂಬುದನ್ನು ಹೇಳಲಾಗದು. ಆದರೆ, ನಾವು ಎಚ್ಚರವಾಗಿದ್ದುಕೊಂಡು, ಮಾಹಿತಿ ಸಂಗ್ರಹಿಸಬಹುದಷ್ಟೇ ಎಂದವರು ಹೇಳಿದ್ದಾರೆ.

ಐ.ಐ.ಟಿ. ಕಾನ್‌ಪುರ ರೀತಿಯ ವರದಿಗಳು ಕೇವಲ ಮಾಹಿತಿಯ ಭವಿಷ್ಯ ನುಡಿದಂತೆಯೇ ಹೊರತು, ಮಾಹಿತಿ ವಿಜ್ಞಾನದಂತಲ್ಲ ಎಂದು ಸಾರ್ವಜನಿಕ ಆರೋಗ್ಯ ಪರಿಣಿತ ಬ್ರಮರ್ ಮುಖರ್ಜಿ ಹೇಳಿದ್ದಾರೆ.

ಎರಡರಿಂದ ನಾಲ್ಕು ವಾರಗಳಿಗೆ ನೀಡಲಾಗುವ ಅಲ್ಪಾವಧಿ ಅಂದಾಜುಗಳು ಹೆಚ್ಚು ನಿಖರವಾಗಿರುತ್ತವೆ ಎಂದು ಅಮೆರಿಕದ ಮಿಚಿಗನ್ ವಿಶ್ವವಿದ್ಯಾನಿಲಯದ ಉಪನ್ಯಾಸಕ ಮುಖರ್ಜಿ ಹೇಳಿದ್ದಾರೆ.

# ವ್ಯವಸ್ಥೆಯ ಪರಿಶೀಲನೆ ಅಗತ್ಯ

**(1ನೇ ಪುಟದಿಂದ)** ಈ ವಿಚಾರವಾಗಿ ಕೇಂದ್ರ ಸಚಿವರ ಜೊತೆ ಸಂಪರ್ಕಿಸುವುದಾಗಿ ಮುಖ್ಯಮಂತ್ರಿ ಬೊಮ್ಮಾಯಿ ವಿವರಿಸಿದರು.

ಬದುಕು ಕಟ್ಟಿಕೊಳ್ಳಲು ವಿದೇಶಕ್ಕೆ ತೆರಳಿದಾಗ ಇಂತಹ ಘಟನೆಗಳು ನಡೆದದ್ದು ನನಗೂ ನೋವುಂಟು ಮಾಡಿದೆ. ನವೀನ್ ಪಾಲಕರ ಮನವಿಯಂತೆ ಮೃತದೇಹವನ್ನು ತಾಯ್ನಾಡಿಗೆ ತರಲು ಆದ್ಯತೆ ನೀಡಲಾಗಿದ್ದು, ಕೇಂದ್ರ ಸಚಿವರ ಜೊತೆ ನಿರಂತರ ಸಂಪರ್ಕ ಹೊಂದಿದ್ದೇನೆ. ನವೀನ್ ಸಹೋದರ ಹರ್ಷ ಪಿಎಚ್ ಡಿ ಮಾಡುತ್ತಿದ್ದು ಓದು ಪೂರ್ಣಗೊಂಡ ಮೇಲೆ ಅವನಿಗೆ ಸೂಕ್ತ ಕೆಲಸದ ವ್ಯವಸ್ಥೆಯನ್ನು ಖಂಡಿತಾ ಮಾಡುತ್ತೇವೆ ಎಂದು ಹೇಳಿದರು.

ಹರಿಹರ ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ, ಸಚಿವರಾದ ಗೋವಿಂದ ಕಾರಜೋಳ, ಬಿ.ಸಿ. ಪಾಟೀಲ, ಸಂಸದ ಶಿವಕುಮಾರ ಉದಾಸಿ, ಶಾಸಕ ಅರುಣಕುಮಾರ ಪೂಜಾರ, ಮಾಜಿ ಸಂಸದ ಐ. ಜಿ. ಸನದಿ, ಅರಣ್ಯ ಅಭಿವೃದ್ಧಿ ನಿಗಮದ ನಿರ್ದೇಶಕಿ ಭಾರತಿ ಜಂಬಗಿ, ನವೀನ್ ತಂದೆ ಶೇಖರಗೌಡ, ತಾಯಿ ವಿಜಯಲಕ್ಷ್ಮಿ, ಜಿಲ್ಲಾಧಿಕಾರಿ ಸಂಜಯ ಶೆಟ್ಟೆಣ್ಣನವರ ಮತ್ತಿತರರಿದ್ದರು.

# ಕರ್ನಾಟಕ ಗ್ರಾಮೀಣ ಬ್ಯಾಂಕ್

(ಸರ್ಕಾರಿ ಸ್ವಾಮ್ಯದ ಷೆಡ್ಯೂಲ್ಡ್ ಬ್ಯಾಂಕ್) ಪ್ರವರ್ತಕರು : ಕೆನರಾ ಬ್ಯಾಂಕ್

ಪ್ರಧಾನ ಕಛೇರಿ : ಸಂಗನಕಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ-583 103 (ಕರ್ನಾಟಕ)

**ಪ್ರಾದೇಶಿಕ ಕಚೇರಿ : ನಂ.496/66, ಸಂಕೋಳ್ ಪ್ಲಾಜಾ, 2ನೇ ಮಹಡಿ ನಾಗನೂರು ರಸ್ತೆ, ಶಾಮನೂರು, ದಾವಣಗೆರೆ-577 004**

ಫೋನ್: 08192 - 223913, 233632 e-mail: rodvg@kgbk.in

## ಚಿನ್ನಾಭರಣಗಳ ಬಹಿರಂಗ ಹರಾಜು

ಈ ಕೆಳಕಂಡ ಮಹನೀಯರು ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಶಾಖೆಗಳಲ್ಲಿ ತಮ್ಮ ಚಿನ್ನಾಭರಣ ಆಧಾರದ ಸಾಲ ಪಡೆದಿದ್ದು, ವಾಯಿದೆ ಪ್ರಕಾರ ಸಾಲ ಮರುಪಾವತಿ ಮಾಡದೇ ಇದ್ದ ಕಾರಣ, ಇವರಿಗೆ ರಿಜಿಸ್ಟರ್ಡ್ ಅಂಚೆ ಮುಖಾಂತರ ಸಾಲಮರುಪಾವತಿ ಮಾಡುವಂತೆ ಕೋರಿ ಕಳುಹಿಸಿದ ನೋಟಿಸ್ ಜಾರಿಯಾಗಿರುತ್ತದೆ. ಆದರೂ ಸಾಲ ಮರುಪಾವತಿ ಮಾಡಲು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ, ಅವರಿಗೆ ಈ ಮೂಲಕ ತಿಳಿಸುವುದೇನೆಂದರೆ, ತಾರೀಖು 22-03-2022 ರಂದು ಅಥವಾ ಅದಕ್ಕೆ ಮುಂಚೆ ಬ್ಯಾಂಕಿಗೆ ಭೇಟಿ ಕೊಟ್ಟು ಸಂಪೂರ್ಣ ಹಣ, ಬಡ್ಡಿ ಹಾಗೂ ಇತರೆ ಖರ್ಚುಗಳನ್ನು ಮರುಪಾವತಿ ಮಾಡತಕ್ಕದ್ದು, ಇಲ್ಲವಾದಲ್ಲಿ ತಾವು ಒತ್ತೆ ಇಟ್ಟ ಆಭರಣಗಳನ್ನು ತಾರೀಖು 22-03-2022 ರಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ಬ್ಯಾಂಕಿಗೆ ಸೂಕ್ತವಾದ ಇನ್ನಾವುದೇ ದಿನದಂದು ನೋಟೀಸು ಕೊಡದೇ ಶಾಖೆಯ ಆವರಣದಲ್ಲಿ ಬಹಿರಂಗವಾಗಿ ಯಾ ಖಾಸಗಿಯಾಗಿ ಹರಾಜು ಮಾಡಲಾಗುವುದು. ಸದರಿ ಹರಾಜಿನಿಂದ ಬಂದ ಮೊತ್ತವು ತಮ್ಮ ಸಾಲವನ್ನು ಸಂಪೂರ್ಣ ತೀರುವಳಿ ಮಾಡಲು ವಿಫಲವಾದಲ್ಲಿ ತಾವು ವೈಯಕ್ತಿಕವಾಗಿ ಹೊಣೆಗಾರರಾಗಿರುತ್ತೀರಿ ಹಾಗೂ ಹರಾಜಿಗೆ ತಗಲುವ ಎಲ್ಲಾ ವೆಚ್ಚಕ್ಕೂ ನೀವೇ ಹೊಣೆಗಾರರೆಂದು ತಿಳಿಯಿರಿ.

### ಶಾಖೆ: ಮುಸ್ಟೂರು, ಜಗಳೂರು ತಾ|| ದಾವಣಗೆರೆ ಜಿಲ್ಲೆ, ಮೊ.: 9008882730

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ದೋಣಪ್ಪರೆಡ್ಡಿ ಆರ್.ಟಿ. ಬಿನ್. ತಿಮ್ಮಪ್ಪರೆಡ್ಡಿ, ಹೆಚ್. ಎಂ. ಹೊಳೆ | 76015301009413 | 1,90,138-00 |
| 2 | ಶ್ರೀಮತಿ ತಿಪ್ಪಮ್ಮ ಕೋಂ. ಅನಂತರೆಡ್ಡಿ, ಸಿದ್ಧಿಹಳ್ಳಿ | 76015301055414 | 1,19,110-00 |
| 3 | ಶ್ರೀಮತಿ ಸುಮಿತ್ರ ಪಿ.ಹೆಚ್. ಕೋಂ. ಸತ್ಯಪ್ಪ, ಮುಸ್ಟೂರು | 40760302030620 | 61,974-00 |
| 4 | ಶ್ರೀ ಮಂಜುನಾಥ ಟಿ.ಎಸ್. ಬಿನ್. ತಿಪ್ಪೇಶ್, ಸಿದ್ದಮ್ಮನಹಳ್ಳಿ | 40760302035920 | 65,789-00 |
| 5 | ಶ್ರೀ ಗುರುಮೂರ್ತಿ ಬಿನ್. ತಿಮ್ಮಪ್ಪ, ಮುಸ್ಟೂರು | 40760302047620 | 42,143-00 |
| 6 | ಶ್ರೀ ಮಹಾಂತೇಶ್ ಎಂ. ಎನ್. ಬಿನ್. ನಾಗಲಿಂಗಪ್ಪ, ಮುಸ್ಟೂರು | 40760302049820 | 53,511-00 |
| 7 | ಶ್ರೀಮತಿ ಜಯಮ್ಮ ಕೋಂ. ಮಾರಪ್ಪ, ಮುಸ್ಟೂರು | 40760302051020 | 26,763-00 |
| 8 | ಶ್ರೀಮತಿ ಓಬಕ್ಕ ಕೋಂ. ಎಂ.ಎನ್. ಮಹಾಂತೇಶ್, ಮುಸ್ಟೂರು | 40760302052020 | 53,456-00 |
| 9 | ಶ್ರೀ ನಾಗಪ್ಪ ಹೆಚ್. ಎನ್. ಬಿನ್. ನಾಗಪ್ಪ, ಹೆಚ್.ಎಂ. ಹೊಳೆ | 40760302053220 | 1,30,324-00 |
| 10 | ಶ್ರೀಮತಿ ಲಕ್ಷ್ಮಿದೇವಿ ಕೆ.ಓ. ಕೋಂ. ನಿಂಗಪ್ಪ, ಮುಸ್ಟೂರು | 40760302054320 | 16,019-00 |
| 11 | ಶ್ರೀ ಕೇಶವಪ್ಪ ಎ.ಎಸ್. ಬಿನ್. ಅಂಕಪ್ಪ, ಮುಸ್ಟೂರು | 76015302074917 | 27,450-00 |
| 12 | ಶ್ರೀ ಮಹಮ್ಮದ್ ಆಸೀಫ್ ಹುಸೇನ್ ಬಿನ್. ಶೇಖ್ ಅಹಮ್ಮದ್ | 40760302002621 | 2,32,987-00 |
| 13 | ಶ್ರೀ ರಾಜಪ್ಪ ಬಿನ್. ಬೀರಪ್ಪ, ಬೆಣ್ಣೆಹಳ್ಳಿ | 40760302034821 | 1,51,791-00 |
| 14 | ಶ್ರೀ ಮುಸ್ಟೂರಪ್ಪ ಎಸ್. ಬಿನ್. ವಿ.ಎಸ್. ಸಂಜೀವಪ್ಪ, ಮುಸ್ಟೂರು | 40760302046321 | 20,000-00 |

### ಶಾಖೆ: ನಂದಿತಾವರೆ, ಹರಿಹರ ತಾ|| ದಾವಣಗೆರೆ ಜಿಲ್ಲೆ, ಮೊ.: 9482205050

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಎ.ಎನ್. ನಾಗರಾಜ ಬಿನ್. ನಿಂಗಪ್ಪ, ಕುಣೆಬೆಳಕೆರೆ | 40768302054620 | 1,20,850-00 |
| 2 | ಶ್ರೀ ಬಸವರಾಜ ಟಿ.ಜಿ. ಬಿನ್. ಗದಿಗೆಪ್ಪ, ನಂದಿತಾವರೆ | 40768302060520 | 4,23,906-00 |
| 3 | ಶ್ರೀ ದೇವರಾಜ್ ಎಂ.ಎಸ್. ಬಿನ್. ಶಿವಮೂರ್ತಪ್ಪ ಎಂ.ಎಸ್.ಯಕ್ಕೆಗುಂದಿ | 40768302050120 | 34,754-00 |
| 4 | ಶ್ರೀ ಜಗದೀಶ ಬಿನ್ ರುದ್ರಗೌಡ, ಬ್ಯಾಲದಹಳ್ಳಿ | 40768302050720 | 28,583-00 |
| 5 | ಶ್ರೀ ಕೊಟ್ರೇಶ್ ಹೆಚ್. ಆರ್. ಬಿನ್. ರೇವಣಪ್ಪ, ಕುಣೆಬೆಳಕೆರೆ | 40768302046320 | 9,798-00 |
| 6 | ಶ್ರೀ ಮಂಜಪ್ಪ ಕೆ.ಜಿ. ಬಿನ್. ನಾಗಪ್ಪ ಕೆ.ಜಿ. ನಂದಿತಾವರೆ | 40768302064520 | 48,099-00 |
| 7 | ಶ್ರೀ ಮಂಜುನಾಥ ಎನ್.ಪಿ. ಬಿನ್. ಬಸವನಗೌಡ | 40768302008121 | 32,671-00 |
| 8 | ಶ್ರೀಮತಿ ಪ್ರೇಮ ಕೋಂ. ಹೆಚ್. ನಾಗಪ್ಪ, ಕುಣೆಬೆಳಕೆರೆ | 40768302048620 | 17,373-00 |
| 9 | ಶ್ರೀ ರೇವಣಸಿದ್ದಪ್ಪ ಬಿನ್. ಸಿದ್ದಪ್ಪ, ಯಕ್ಕೆಗುಂದಿ | 40768302047720 | 30,223-00 |
| 10 | ಶ್ರೀಮತಿ ಸಾಕಮ್ಮ ಕೋಂ. ನಾಗೇಂದ್ರಪ್ಪ, ಕುಣೆಬೆಳಕೆರೆ | 40768302055820 | 9,706-00 |
| 11 | ದೀಪಮ್ಮ ಬಿನ್. ಬೆಳಕೇರಪ್ಪ, ಕುಣೆಬೆಳಕೆರೆ | 40768302068220 | 6,843-00 |

### ಶಾಖೆ: ಕುಂಬಳೂರು-ಹರಿಹರ, ಹರಿಹರ ತಾ|| ದಾವಣಗೆರೆ ಜಿಲ್ಲೆ ಮೊ.: 9980433090

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀಮತಿ ರಮಾಲಕ್ಷ್ಮಿ ಕೋಂ. ಸತ್ಯನಾರಾಯಣ, ವಿ.ಎನ್. ಕ್ಯಾಂಪ್ | 71215302009419 | 24,771-00 |
| 2 | ಶ್ರೀಮತಿ ಸಾವಿತ್ರಿ ಕೋಂ. ಲೇಟ್ ವಿಶ್ವನಾಥ, ಕುಂಬಳೂರು | 71215302017319 | 25,226-00 |
| 3 | ಶ್ರೀ ನಾರಾಯಣಪ್ಪ ಕೆ. ಬಿನ್. ಮರಿಯಪ್ಪ, ಕುಂಬಳೂರು | 40712302070319 | 2,35,440-00 |
| 4 | ಶ್ರೀ ರೆಡ್ಡಿಹಳ್ಳಿ ಹನುಮಂತಪ್ಪ ಬಿನ್. ಕರಿಯಮ್ಮ, ಹರಳಹಳ್ಳಿ | 40712302008820 | 1,20,381-00 |
| 5 | ಶ್ರೀ ಮಂಜಪ್ಪ ಹೆಚ್. ಬಿನ್. ನಂದ್ಯಪ್ಪ, ಜಿ. ಬಬೇವಿನಹಳ್ಳಿ | 40712302012620 | 1,55,560-00 |
| 6 | ತಿರುಪಕ್ಕ ಬಿನ್. ನಿಂಗಪ್ಪ, ಕುಂಬಳೂರು | 40712302012720 | 1,97,154-00 |
| 7 | ಶ್ರೀ ಮಲ್ಲೇಶಿ ಬಿನ್. ರುದ್ರಪ್ಪ, ಸಂಕ್ಲೀಪುರ, ಗುಳದಳ್ಳಿ ಪೋಸ್ಟ್ | 40712302013520 | 47,943-00 |
| 8 | ಶ್ರೀ ರುದ್ರಪ್ಪ ಬಿನ್. ತಿಪ್ಪೇಶಪ್ಪ, ಗುಳದಳ್ಳಿ | 40712302056320 | 21,468-00 |
| 9 | ಶ್ರೀ ಹನುಮಂತಪ್ಪ ಬಿನ್. ಶೇಖರಪ್ಪ, ನಿಟ್ಟೂರು | 40712302057320 | 28,289-00 |
| 10 | ಶ್ರೀ ಕಾಂತರಾಜ್ ಕೆ.ಎಂ. ಬಿನ್. ಗದಿಗಮ್ಮ, ನಿಟ್ಟೂರು ರಸ್ತೆ, ಕುಂಬಳೂರು | 40712302069020 | 23,302-00 |
| 11 | ಶ್ರೀಮತಿ ನಾಗರತ್ನಮ್ಮ ಕೋಂ. ಹನುಮಂತಪ್ಪ, ಮಲ್ಲನಾಯಕನಹಳ್ಳಿ | 40712302075920 | 13,379-00 |
| 12 | ಶ್ರೀ ನಾಗರಾಜ ಬಿನ್. ಮಲ್ಲಪ್ಪ, ಕುಂಬಳೂರು | 40712302085620 | 25,299-00 |
| 13 | ಶ್ರೀ ಮಹಾದೇವಪ್ಪ ಜಿ.ಬಿ. ಬಿನ್. ಬಸವರಾಜಪ್ಪ ಜಿ, ಗುಳದಳ್ಳಿ | 40712302091820 | 30,703-00 |
| 14 | ಶ್ರೀಮತಿ ನಾಗಮ್ಮ ಕೋಂ. ಬನ್ನಿಕೋಡ್ ನಾಗರಾಜಪ್ಪ, ಕುಂಬಳೂರು | 40712302092420 | 39,393-00 |
| 15 | ಶ್ರೀ ಬಿ.ಜಿ. ವಿಜಯಕುಮಾರ್ ಬಿನ್. ಶೇಖರಪ್ಪ ಬಿ.ಜಿ. ನಿಟ್ಟೂರು | 40712302100320 | 94,517-00 |
| 16 | ಶ್ರೀ ಜಿ.ಎಸ್. ಮಂಜುನಾಥ್ ಬಿನ್. ಸಿದ್ದಲಿಂಗಪ್ಪ, ಕುಣೆಬೆಳಕೆರೆ | 40712302101320 | 67,096-00 |
| 17 | ಶ್ರೀಮತಿ ಗದಿಗಮ್ಮ ಕೋಂ. ತಿಪ್ಪೇಶಪ್ಪ, ಕುಂಬಳೂರು | 40712302111220 | 30,165-00 |
| 18 | ಶ್ರೀಮತಿ ರೇಖಾ ಕೋಂ. ಬಿ. ಭದ್ರೇಶ್, ಕುಂಬಳೂರು | 40712302112020 | 40,900-00 |
| 19 | ಶ್ರೀಮತಿ ಸೌಂದರ್ಯ ಕೋಂ. ಚಂದ್ರಶೇಖರ್ ಕೆ.ಹೆಚ್., ಕುಂಬಳೂರು | 40712302112920 | 76,213-00 |
| 20 | ಶ್ರೀ ಅಖಿಲೇಶ್ ಎಂ.ಡಿ. ಬಿನ್. ಎಂ. ಧನಂಜಯಪ್ಪ, ಜಿಗಳಿ | 40712302113120 | 9,216-00 |
| 21 | ಶ್ರೀ ಕೆ. ತಿಮ್ಮಪ್ಪ ಬಿನ್. ಹನುಮಂತಪ್ಪ, ಕುಂಬಳೂರು | 40712302114620 | 1,55,277-00 |
| 22 | ಶ್ರೀ ಮಹಾದೇವಪ್ಪ ಜಿ.ಬಿ. ಬಿನ್. ಬಸವರಾಜಪ್ಪ, ಗುಳದಳ್ಳಿ | 40712302112520 | 19,447-00 |

### ಶಾಖೆ: ರಾಂಪುರ, ದಾವಣಗೆರೆ ತಾ|| ದಾವಣಗೆರೆ ಜಿಲ್ಲೆ ಮೊ.: 9482109627

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಶಿವಲಿಂಗಯ್ಯ ಬಿನ್. ನಾಗಯ್ಯ, ರಾಂಪುರ, ಕಾಡಜ್ಜಿ ಪೋಸ್ಟ್, ದಾವಣಗೆರೆ | 78715301020114 | 3,65,067-50 |
| 2 | ಶ್ರೀ ರುದ್ರಪ್ಪ, ಕಾಡಜ್ಜಿ ಪೋಸ್ಟ್ | 78715301048414 | 2,33,598-00 |
| 3 | ಶ್ರೀ ಚಿಕ್ಕಣ್ಣ ಬಿನ್. ನಾಗಪ್ಪ, ಆಲೂರು | 40787302068119 | 12,301-50 |
| 4 | ಶ್ರೀಮತಿ ರತ್ನಾಬಾಯಿ ಕೋಂ. ಕೃಷ್ಣಮೂರ್ತಿ, ನಾಗರಕಟ್ಟೆ | 40787302045220 | 56,738-00 |
| 5 | ಶ್ರೀ ಜಯಪ್ಪ ಬಿ. ಬಿನ್. ಸಣ್ಣ ಹನುಮಂತಪ್ಪ, ಆಲೂರು | 40787302046420 | 54,387-40 |
| 6 | ಶ್ರೀ ನಾಗರಾಜನಾಯ್ಕ ಬಿನ್. ಧರ್ಮಾನಾಯ್ಕ, ಆಲೂರುಹಟ್ಟಿ | 40787302048420 | 1,08,461-40 |
| 7 | ಶ್ರೀ ನಾಗರಾಜನಾಯ್ಕ ಬಿನ್. ಧರ್ಮಾನಾಯ್ಕ, ಆಲೂರುಹಟ್ಟಿ | 40787302048520 | 65,067-40 |
| 8 | ಶ್ರೀ ಬಸವನಗೌಡ ಬಿ.ಜಿ. ಬಿನ್. ಸಿದ್ದಬಸಯ್ಯ, ಬಸವನಾಳು ಪೋಸ್ಟ್ | 40787302050120 | 56,350-40 |
| 9 | ಶ್ರೀ ರೇವಣಸಿದ್ದಪ್ಪ ಬಿನ್. ದಾವಣಗೆರೆ ಮಂಜಪ್ಪ, ಆಲೂರು ಪೋಸ್ಟ್ | 40787302051020 | 1,08,251-90 |
| 10 | ಶ್ರೀ ಸಿದ್ದಪ್ಪ ಬಿನ್. ಕರಿಯಪ್ಪ, ಬಿ. ಗೊಲ್ಲರಹಟ್ಟಿ | 40787302051720 | 48,789-90 |
| 11 | ಶ್ರೀ ಹನುಮಂತಪ್ಪ ಎಂ.ಎಸ್. ಬಿನ್. ಸಿದ್ದಪ್ಪ, ಆಲೂರು | 40787302053520 | 98,087-90 |
| 12 | ಶ್ರೀ ಬಸವರಾಜಪ್ಪ ಡಿ.ಸಿ. ಬಿನ್. ಚನ್ನಬಸಪ್ಪ, ಮೆಳ್ಳೆಕಟ್ಟೆ | 40787302055920 | 86,211-00 |
| 13 | ಶ್ರೀಮತಿ ರೇಣುಕಮ್ಮ ಕೋಂ. ಹನುಮಂತಪ್ಪ, ಆಲೂರು | 40787302057820 | 16,101-40 |
| 14 | ಶ್ರೀಮತಿ ರೇಣುಕಮ್ಮ ಕೋಂ. ಹನುಮಂತಪ್ಪ, ಆಲೂರು | 40787302012221 | 10,480-00 |
| 15 | ಶ್ರೀಮತಿ ವನಜಾಕ್ಷಿ ಕೋಂ. ಅಂಜಿನಪ್ಪ, ಆಲೂರು | 40787302064120 | 92,988-00 |
| 16 | ಶ್ರೀ ಕೆ.ಬಿ. ಚಂದ್ರಶೇಖರಪ್ಪ ಬಿನ್. ಬಸಪ್ಪ, ಆಲೂರು | 40787302064320 | 36,577-00 |
| 17 | ಶ್ರೀ ಮಂಜಪ್ಪ ಬಿನ್. ಹನುಮಂತಪ್ಪ, ಆಲೂರು | 40787302064620 | 22,617-00 |
| 18 | ಶ್ರೀ ಡಿ. ಸಂತೋಷ್‌ನಾಯ್ಕ ಬಿನ್. ದೇನ್ಯಾನಾಯ್ಕ, ಆಲೂರುಹಟ್ಟಿ | 40787302062420 | 38,819-00 |
| 19 | ಶ್ರೀ ಹನುಮಂತಪ್ಪ ಬಿನ್. ಆಲೂರಪ್ಪ, ಆಲೂರು | 40787302030421 | 31,620-00 |
| 20 | ಶ್ರೀಮತಿ ವನಜಾಕ್ಷಿ ಕೋಂ. ಅಂಜಿನಪ್ಪ, ಆಲೂರು | 40787302016021 | 14,027-00 |
| 21 | ಶ್ರೀಮತಿ ರೇಣುಕಮ್ಮ ಕೋಂ. ಹನುಮಂತಪ್ಪ, ಆಲೂರು | 40787302012221 | 10,819-00 |
| 22 | ಶ್ರೀ ಡಿ. ಸಂತೋಷ್‌ನಾಯ್ಕ ಬಿನ್. ದೇನ್ಯಾನಾಯ್ಕ, ಆಲೂರುಹಟ್ಟಿ | 40787302001521 | 66,832-00 |

### ಶಾಖೆ: ಡಿ.ಬಿ.ಕೆರೆ, ಹರಿಹರ ತಾ|| ದಾವಣಗೆರೆ ಜಿಲ್ಲೆ ಮೊ.: 9481909515

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀಮತಿ ಅಂಗಡಿ ನಾಗಮ್ಮ ಕೋಂ. ಮಹೇಶ್ವರಪ್ಪ, ಡಿ.ಬಿ. ಕೆರೆ | 40585302043620 | 1,10,381-00 |
| 2 | ಶ್ರೀಮತಿ ಅಂಗಡಿ ನಾಗಮ್ಮ ಕೋಂ. ಮಹೇಶ್ವರಪ್ಪ, ಡಿ.ಬಿ. ಕೆರೆ | 40585302043720 | 1,36,430-00 |
| 3 | ಶ್ರೀ ಬಸವರಾಜ ಆರ್.ಜೆ. ಬಿನ್. ಡಿ.ಬಿ. ಜಯಕುಮಾರ್, ಡಿ.ಬಿ. ಕೆರೆ | 40585302026620 | 1,73,123-00 |
| 4 | ಶ್ರೀಮತಿ ಚಮನ್‌ಬಿ ಕೋಂ. ಪೀರ್‌ಸಾಬ್, ಡಿ.ಬಿ.ಕೆರೆ | 40585302058220 | 21,353-00 |
| 5 | ಶ್ರೀಮತಿ ಚಂದ್ರಮ್ಮ ಕೋಂ. ಸುರೇಶ್, ಡಿ.ಬಿ.ಕೆರೆ | 40585302012321 | 12,558-00 |
| 6 | ಶ್ರೀಮತಿ ಚಂದ್ರಮ್ಮ ಕೋಂ. ಸುರೇಶ್, ಡಿ.ಬಿ.ಕೆರೆ | 40585302044720 | 41,369-00 |
| 7 | ಶ್ರೀ ಧನಂಜಯ ಬಿನ್. ರಾಮನಗೌಡ, ಸಂಕ್ಲೀಪುರ | 40585302054821 | 1,55,000-00 |
| 8 | ಶ್ರೀ ದೊಡ್ಡಪ್ಪ ಬಿನ್. ದೊಡ್ಡಪ್ಪ, ಡಿ.ಬಿ.ಕೆರೆ | 40585302054521 | 42,000-00 |
| 9 | ಶ್ರೀ ಕರಿಬಸಪ್ಪ ಡಿ.ಬಿ. ಬಿನ್. ಬಸವರಾಜಪ್ಪ, ಡಿ.ಬಿ.ಕೆರೆ | 40585302055020 | 21,543-00 |
| 10 | ಶ್ರೀ ಮಲ್ಲಿಕಾರ್ಜುನ ಪಿ. ಬಿನ್. ಪರಮೇಶ್ವರಪ್ಪ, ಬೂದಿಹಾಳ್ | 40585302041120 | 1,77,808-00 |
| 11 | ಶ್ರೀ ಮಂಜುನಾಥ ಬಾಲಮ್ಮನವರ ಬಿನ್. ಹಾಲಪ್ಪ ಬಾಲಮ್ಮನವರ, ಡಿ.ಬಿ.ಕೆರೆ | 40585302056320 | 10,880-00 |
| 12 | ಶ್ರೀಮತಿ ಪದ್ಮ ಕೋಂ. ಶೇಖರಪ್ಪ, ಜರೀಕಟ್ಟೆ | 40585302053420 | 1,44,867-00 |
| 13 | ಶ್ರೀಮತಿ ಪ್ರೇಮ ವಿ.ಹೆಚ್. ಕೋಂ. ಹೆಚ್. ಎಸ್. ವೀರಣ್ಣ, ಡಿ.ಬಿ.ಕೆರೆ | 40585302056820 | 18,182-00 |
| 14 | ಶ್ರೀ ರಮೇಶ ಕೋಂ. ನಾರಾಯಣಪ್ಪ, ಜರೀಕಟ್ಟೆ | 40585302037320 | 1,28,668-00 |
| 15 | ಶ್ರೀ ರವೀಂದ್ರ ಎಂ.ಈ. ಬಿನ್. ಈರಪ್ಪ ರೆಡ್ಡಿ, ಕಡ್ಲೆಗುಂದಿ | 40585302054620 | 53,967-00 |
| 16 | ಶ್ರೀಮತಿ ಸಾಜಿಲ್ಲಾಬಾನು ಕೋಂ. ರಹೀಮ್‌ಸಾಬ್, ಡಿ.ಬಿ.ಕೆರೆ | 40585302058020 | 12,812-00 |
| 17 | ಶ್ರೀಮತಿ ಸುಲೋಚನ ಜೆ. ಕೋಂ. ಲೇಟ್ ಕೆಂಚನಗೌಡ, ಬೂದಿಹಾಳ್ | 40585302055620 | 1,17,834-00 |
| 18 | ಶ್ರೀಮತಿ ಉಮಾ ಕೋಂ. ನಾಗರಾಜ, ಡಿ.ಬಿ. ಕೆರೆ | 40585302034820 | 26,926-00 |

### ಶಾಖೆ: ಮಲ್ಲಾಪುರ, ಜಗಳೂರು ತಾ|| ದಾವಣಗೆರೆ ಜಿಲ್ಲೆ ಮೊ.: 9030111373

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ವೆಂಕಟೇಶ್ ಟಿ. ಬಿನ್. ತಿಪ್ಪಯ್ಯ, ಮಲ್ಲಾಪುರ | 72715301005913 | 1,09,316-00 |
| 2 | ಶ್ರೀ ರಾಮರೆಡ್ಡಿ ಆರ್. ಬಿನ್. ಯಂಗಣ್ಣರೆಡ್ಡಿ, ಸಿ.ಎಂ. ಹೊಳೆ | 72715301010813 | 1,10,809-00 |
| 3 | ಶ್ರೀಮತಿ ಸುಮ ಜಿ.ಜೆ. ಕೋಂ. ಕೆ. ನಾರಾಯಣರೆಡ್ಡಿ, ಹುಚ್ಚವ್ವನಹಳ್ಳಿ | 72715301017714 | 98,624-00 |
| 4 | ಶ್ರೀ ಶಿವಲಿಂಗಪ್ಪ ಬಿನ್. ಸಣ್ಣಪ್ಪ ಹೆಚ್. ಎಂ., ಹೆಚ್.ಎಂ.ಹೊಳೆ ಗೊಲ್ಲರಹಟ್ಟಿ | 72715301010415 | 36,755-00 |
| 5 | ಶ್ರೀ ಪೂಜಿರ ಬಾಲಯ್ಯ ಬಿನ್. ಮುದಿಯಪ್ಪ, ಜಿ.ಕೆ. ಹಳ್ಳಿ | 72715301020216 | 29,201-00 |
| 6 | ಶ್ರೀಮತಿ ಮಳಿಯಮ್ಮ ಕೋಂ. ಶಾಂತಪ್ಪ, ಸಿ.ಎಂ. ಹೊಳೆ | 72715301022318 | 7,667-00 |
| 7 | ಶ್ರೀ ವೆಂಕಟೇಶ್ ಟಿ. ಬಿನ್. ತಿಪ್ಪಯ್ಯ, ಮಲ್ಲಾಪುರ | 72715301039118 | 20,357-00 |
| 8 | ಶ್ರೀ ವೆಂಕಟೇಶ್ ಟಿ. ಬಿನ್. ತಿಪ್ಪಯ್ಯ, ಮಲ್ಲಾಪುರ | 72715301039218 | 27,425-00 |
| 9 | ಶ್ರೀ ಮಾರುತೇಶ್ ಟಿ. ಬಿನ್. ತಿಪ್ಪಯ್ಯ, ಸಿ.ಎಂ. ಹೊಳೆ | 72715301050218 | 18,178-00 |
| 10 | ಶ್ರೀ ಸತ್ಯನಾರಾಯಣರೆಡ್ಡಿ ಬಿ.ಹೆಚ್. ಬಿನ್. ಹನುಮಂತಪ್ಪ, ಸಾಲೇಹಳ್ಳಿ | 40727302000920 | 84,700-00 |
| 11 | ಶ್ರೀ ಧನಂಜಯ ಎನ್. ಬಿನ್. ನಿಂಗಪ್ಪ, ಮಲ್ಲಾಪುರ | 40727302008720 | 1,03,093-00 |
| 12 | ಶ್ರೀ ಪ್ರಕಾಶ್ ರೆಡ್ಡಿ ಎಲ್.ಬಿನ್. ಲಕ್ಷ್ಮಣರೆಡ್ಡಿ, ಮಲ್ಲಾಪುರ | 40727302009920 | 99,023-00 |
| 13 | ಶ್ರೀ ವೆಂಕಟೇಶ್ ಬಿನ್. ಪಾಲಯ್ಯ, ದಿಬ್ಬದಹಳ್ಳಿ | 40727302015720 | 9,903-00 |
| 14 | ಶ್ರೀ ಕೃಷ್ಣಮೂರ್ತಿ ವೈ. ಬಿನ್. ಯಲ್ಲಪ್ಪ, ಹುಚ್ಚವ್ವನಹಳ್ಳಿ | 40727302016820 | 65,105-00 |
| 15 | ಶ್ರೀ ವೆಂಕಟೇಶ್ ವೈ. ಬಿನ್. ಯರಪ್ಪ, ಹುಚ್ಚವ್ವನಹಳ್ಳಿ | 40727302023221 | 63,464-00 |
| 16 | ಶ್ರೀ ವೆಂಕಟೇಶ್ ವೈ. ಬಿನ್. ಯರಪ್ಪ, ಹುಚ್ಚವ್ವನಹಳ್ಳಿ | 40727302025521 | 1,25,275-00 |
| 17 | ಶ್ರೀ ಕರಿಯಪ್ಪ ಬಿನ್. ಬೊಮ್ಮಯ್ಯ, ಹೆಚ್. ಎಂ. ಹೊಳೆ ಗೊಲ್ಲರಹಟ್ಟಿ | 40727302034719 | 36,869-00 |
| 18 | ಶ್ರೀ ರಾಮಚಂದ್ರಣ್ಣ ಜಿ.ಎನ್. ಬಿನ್. ನರಸಪ್ಪ, ಮಲ್ಲಾಪುರ | 40727302035020 | 95,623,-00 |
| 19 | ಶ್ರೀ ವೆಂಕಟೇಶ ಎಂ.ಟಿ. ಬಿನ್. ತಿಮ್ಮಾರೆಡ್ಡಿ ಎಂ.ಟಿ., ಮಲ್ಲಾಪುರ | 40727302035519 | 13,611-00 |
| 20 | ಶ್ರೀಮತಿ ಮಂಗಳಮ್ಮ ಕೋಂ. ನಾಗರಾಜ, ಸಿ.ಎಂ. ಹೊಳೆ | 40727302041420 | 10,037-00 |
| 21 | ಶ್ರೀ ಟಿ. ನಾಗರಾಜ ಬಿನ್. ತಿಪ್ಪೇಸ್ವಾಮಿ, ಹುಚ್ಚವ್ವನಹಳ್ಳಿ | 40727302046220 | 1,87,644-00 |
| 22 | ಶ್ರೀ ಮಾರಪ್ಪ ಬಿನ್. ಬಜ್ಜಪ್ಪ, ಹುಚ್ಚವ್ವನಹಳ್ಳಿ | 40727302046320 | 45,789-00 |
| 23 | ಶ್ರೀಮತಿ ರೇಖಮ್ಮ ಕೋಂ. ಬಸವೇಶ ಎಂ., ಸಿ.ಎಂ. ಹೊಳೆ | 40727302046920 | 11,830-00 |
| 24 | ಶ್ರೀಮತಿ ಲಕ್ಷ್ಮಿದೇವಿ ಕೋಂ. ಕೆ. ಸುರೇಶ, ಸಿ.ಎಂ. ಹೊಳೆ | 40727302047620 | 8,612-00 |
| 25 | ಶ್ರೀಮತಿ ಲಕ್ಷ್ಮಿದೇವಿ ಕೋಂ. ಕೆ. ಸುರೇಶ, ಸಿ.ಎಂ. ಹೊಳೆ | 40727302047720 | 44,822-00 |
| 26 | ಶ್ರೀ ರಾಜಶೇಖರ ಬಿನ್. ಜಗಳೂರು ಜಯಣ್ಣ ಎಂ., ಚಿಕ್ಕಮಲ್ಲನಹೊಳೆಘಟ್ಟ. | 40727302048520 | 54,893-00 |

### ಶಾಖೆ: ತೋರಣಘಟ್ಟ, ಜಗಳೂರು ತಾ|| ದಾವಣಗೆರೆ ಜಿಲ್ಲೆ, ಮೊ.: 9482108232

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಲೋಕಪ್ಪ ಬಿನ್. ಹುಲಿಯಪ್ಪ, ತೋರಣಘಟ್ಟ | 40846302015820 | 50,429-00 |
| 2 | ಶ್ರೀ ಶಿವಣ್ಣ ಬಿ. ಬಿನ್. ಜಿ.ಟಿ. ಬಾಡಪ್ಪ, ತೋರಣಘಟ್ಟ | 40846302007520 | 35,370-00 |
| 3 | ಶ್ರೀ ಬಾಲರಾಜ್ ಜಿ.ವಿ. ಬಿನ್. ವೇಣುಗೋಪಾಲಪ್ಪ, ತೋರಣಘಟ್ಟ | 40846302003620 | 18,573-00 |
| 4 | ಶ್ರೀಮತಿ ನಾಗವೇಣಿ ಕೋಂ. ನಾಗಪ್ಪ, ತೋರಣಘಟ್ಟ | 40846302007620 | 1,20,828-00 |
| 5 | ಶ್ರೀಮತಿ ಸಿದ್ದಮ್ಮ ಕೋಂ. ಎಂ.ವಿ. ವೀರಣ್ಣ, ತೋರಣಘಟ್ಟ | 40846302010320 | 69,724-00 |
| 6 | ಶ್ರೀ ವೀರಬಾಲಪ್ಪ ಬಿನ್. ದಾಸಪ್ಪ, ಜಮ್ಮಾಪುರ ಗೊಲ್ಲರಹಟ್ಟಿ | 40846302019919 | 19,043-00 |
| 7 | ಶ್ರೀ ತಿಪ್ಪೇಸ್ವಾಮಿ ಡಿ. ಬಿನ್. ದಾಸಪ್ಪ, ಜಮ್ಮಾಪುರ ಗೊಲ್ಲರಹಟ್ಟಿ | 40846302005920 | 32,309-00 |

### ಶಾಖೆ: ಹೆಬ್ಬಾಳು, ದಾವಣಗೆರೆ ತಾ||, ದಾವಣಗೆರೆ ಜಿಲ್ಲೆ. ಮೊ: 9945746456

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀಮತಿ ಹೇಮಕ್ಕ ಕೋಂ. ತಿಮ್ಮಪ್ಪ ಎಂ.ಜಿ., ಮಂಡಲೂರುಗೊಲ್ಲಹಟ್ಟಿ | 63715301016218 | 32,848-00 |
| 2 | ಶ್ರೀ ಮಾರುದ್ರಪ್ಪ ಆರ್. ಬಿನ್. ರಂಗಪ್ಪ, ಕಟ್ಟಿಹಳ್ಳಿ | 40637302037821 | 60,051-00 |
| 3 | ಶ್ರೀಮತಿ ಸಿದ್ದಮ್ಮ ಕೋಂ. ಮಹಾರುದ್ರಯ್ಯ, ನೀರ್ಥಡಿ | 40637302036921 | 30,064-00 |
| 4 | ಶ್ರೀ ರುದ್ರೇಶ ಹೆಚ್.ಟಿ. ಬಿನ್. ತಿಪ್ಪೇಸ್ವಾಮಿ, ಹೆಬ್ಬಾಳು | 40637302044820 | 60,999-00 |
| 5 | ಶ್ರೀ ತಿಪ್ಪೇಸ್ವಾಮಿ ಬಿನ್. ವೆಂಕಟೇಶ್, ಹೆಬ್ಬಾಳು | 40637302037720 | 60,141-00 |
| 6 | ಶ್ರೀಮತಿ ಮಮತಾ ಕೋಂ. ಬೊಮ್ಮೆನಾಳ್ ನಾಗರಾಜ್, ಹೆಬ್ಬಾಳು | 40637302030821 | 20,183-00 |
| 7 | ಶ್ರೀಮತಿ ತಿಪ್ಪಮ್ಮ ಕೋಂ. ಮಹದೇವಯ್ಯ, ಹೆಬ್ಬಾಳು | 40637302026921 | 65,088-00 |
| 8 | ಶ್ರೀಮತಿ ತಿಪ್ಪಮ್ಮ ಕೋಂ. ಮಹದೇವಯ್ಯ, ಹೆಬ್ಬಾಳು | 40637302039520 | 21,801-00 |
| 9 | ಶ್ರೀ ಹನುಮಂತಪ್ಪ ಬಿನ್. ಭೀಮಪ್ಪ ಕೂಲಿ, ಮಂಡಲೂರು | 40637302048620 | 20,283-00 |
| 10 | ಶ್ರೀ ಕೆ. ದೇವರಾಜಪ್ಪ ಬಿನ್. ಹನುಮಂತಪ್ಪ, ಓಬಣ್ಣನಹಳ್ಳಿ | 40637302036420 | 19,676-00 |

### ಶಾಖೆ: ಕೊಕ್ಕನೂರು, ಹರಿಹರ ತಾ|| ದಾವಣಗೆರೆ ಜಿಲ್ಲೆ, ಮೊ.: 7760518378

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಹಾಲಪ್ಪ ಹೆಚ್.ಬಿನ್. ಸಿದ್ದಪ್ಪ, ಜಿ.ಟಿ.ಕಟ್ಟೆ | 40677302064921 | 42,536-00 |
| 2 | ಶ್ರೀ ಹನುಮಂತಪ್ಪ ಕೆ. ದಾಸರ ಬಿನ್. ಸಿದ್ದಪ್ಪ, ಕೊಕ್ಕನೂರು | 40677302104721 | 45,000-00 |
| 3 | ಶ್ರೀ ರಾಮಪ್ಪ ವೈ. ಬಿನ್. ಹನಮಂತಪ್ಪ, ಕೊಕ್ಕನೂರು | 40677302065121 | 15,192-00 |

### ಶಾಖೆ: ಸವಳಂಗ, ನ್ಯಾಮತಿ ತಾ|| ದಾವಣಗೆರೆ ಜಿಲ್ಲೆ, ಮೊ.: 9449132737

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಹಾಲೇಶಪ್ಪ ಕೆ. ಬಿನ್. ರುದ್ರಪ್ಪ, ಹಳೇಜೋಗ | 40990302032319 | 81,304-00 |
| 2 | ಶ್ರೀ ಸುರೇಶ್ ಬಿನ್. ರುದ್ರಪ್ಪ, ಹಳೇಜೋಗ | 40990302006720 | 76,340-00 |
| 3 | ಶ್ರೀಮತಿ ಜಮ್‌ಷಿದಾಬಾನು ಕೋಂ. ಬಾಬುಸಾಬ್, ಇಸಾಳಪುರಕೆರೆ, ನುಗ್ಗಿಮಲ್ಲಾಪುರ | 40990302041520 | 22,670-00 |

### ಶಾಖೆ: ಸಿರಿಗೆರೆ, ಹರಿಹರ ತಾ|| ದಾವಣಗೆರೆ ಜಿಲ್ಲೆ ಮೊ.: 9008079801

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀಮತಿ ಎಸ್. ಸುಮಂಗಲ ಕೋಂ. ಎಂ. ಹೇಮಂತ್, ಸಿರಿಗೆರೆ | 40815302057320 | 79,972-00 |
| 2 | ಶ್ರೀ ಎಂ. ಹೇಮಂತಕುಮಾರ್ ಬಿನ್. ತಿರುಕಪ್ಪ, ಸಿರಿಗೆರೆ | 40815302055820 | 2,13,192-00 |
| 3 | ಶ್ರೀ ತಿಪ್ಪಣ್ಣ ಜಿ. ಬಿನ್. ಬಸಪ್ಪ, ಸಿರಿಗೆರೆ | 40815302054020 | 1,22,524-00 |
| 4 | ಶ್ರೀ ಮಹಾದೇವಪ್ಪ ಬಿ. ಬಿನ್. ಅಡಿವೆಪ್ಪ, ಕಮಲಾಪುರ | 40815302049020 | 38,947-00 |
| 5 | ಶ್ರೀ ಬಸವರಾಜ್ ಕೆ.ಎಸ್. ಬಿನ್. ಸೋಮಶೇಖರಪ್ಪ, ನಂದಿಗಾವಿ | 40815302046520 | 1,34,373-00 |
| 6 | ಶ್ರೀಮತಿ ರೂಪ ಕೋಂ. ಪ್ರಭು, ಸಿರಿಗೆರೆ | 40815302044520 | 76,153-00 |
| 7 | ಶ್ರೀ ನಾಗರಾಜ ಹಾಲಗೆರೆ ಬಿನ್. ಪರಮೇಶಪ್ಪ, ಸಿರಿಗೆರೆ | 40815302043220 | 89,261-00 |
| 8 | ಶ್ರೀಮತಿ ವನಿತಾ ಕೆ. ಕೋಂ. ಕೆ. ಬಸಪ್ಪ, ಸಿರಿಗೆರೆ | 40815302043120 | 37,483-00 |
| 9 | ಶ್ರೀ ಮಹಾದೇವಪ್ಪ ಬಿ. ಬಿನ್. ಅಡಿವೆಪ್ಪ, ಕಮಲಾಪುರ | 40815302041520 | 8,497-00 |
| 10 | ಶ್ರೀಮತಿ ಕಮಲಮ್ಮ ಕೋಂ. ಲೇಟ್ ಹನುಮಂತಪ್ಪ, ಸಿರಿಗೆರೆ | 40815302041320 | 28,175-00 |
| 11 | ಶ್ರೀ ಬಸವರಾಜ ಕೆ.ಜಿ. ಬಿನ್. ಗುರುಬಸಪ್ಪ ಕೆ., ಕಮಲಾಪುರ | 40815302039220 | 2,11,835-00 |
| 12 | ಶ್ರೀ ಹೆಚ್.ಎಂ. ವಿಶ್ವನಾಥಯ್ಯ ಬಿನ್. ಹೆಚ್. ಎಂ. ಶೇಖರಯ್ಯ, ಯಳೆಹೊಳೆ | 40815302034720 | 60,334-00 |
| 13 | ಶ್ರೀಮತಿ ಮುನ್ನಿಮಾ ಕೋಂ. ಮಹಬೂಬ್‌ಸಾಬ್, ಯಲವಟ್ಟಿ | 40815302014919 | 75,676-00 |
| 14 | ಶ್ರೀ ಬಸವನಗೌಡ ಎನ್.ಜಿ. ಬಿನ್. ಹಾಲಪ್ಪ, ನಂದಿಗಾವಿ | 40815302087215 | 18,849-00 |
| 15 | ಶ್ರೀ ಬಸವನಗೌಡ ಎನ್.ಜಿ. ಬಿನ್. ಹಾಲಪ್ಪ, ನಂದಿಗಾವಿ | 40815302043715 | 21,382-00 |

ದಿನಾಂಕ : 05-03-2022
ಸ್ಥಳ : ದಾವಣಗೆರೆ

ಸಹಿ/- ಕರ್ನಾಟಕ ಗ್ರಾಮೀಣ ಬ್ಯಾಂಕ್
ಪ್ರಾದೇಶಿಕ ಕಛೇರಿ,ದಾವಣಗೆರೆ.

## ನಗರದಲ್ಲಿ ಇಂದು ಸಂಗೀತ ಕಾರ್ಯಕ್ರಮ

ಪಂ. ಪಂಚಾಕ್ಷರಿ ಗವಾಯಿಗಳವರ 130ನೇ ಹಾಗೂ ಪದ್ಮಭೂಷಣ ಡಾ. ಪಂ. ಪುಟ್ಟರಾಜ ಗವಾಯಿಗಳ 108ನೇ ಜನ್ಮ ದಿನೋತ್ಸವದ ಪ್ರಯುಕ್ತ ಇಂದು ಸಂಜೆ 4.30 ಕ್ಕೆ ಸ್ವಕುಳಸಾಳಿ ಸಮಾಜದ ಕಲ್ಯಾಣ ಮಂಟಪದಲ್ಲಿ ಇಂದು ಸಂಗೀತ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮದ ಸಾನ್ನಿಧ್ಯವನ್ನು ಶಿವಪ್ರಕಾಶ್ ಮಹಾರಾಜ್ (ದೂಪದಳ್ಳಿ, ಕೊಟ್ಟೂರು) ಅವರು ವಹಿಸುವರು. ಸರ್ಕಾರಿ ಅಂಧ ಹೆಣ್ಣು ಮಕ್ಕಳ ಪಾಠಶಾಲೆ ಇವರಿಂದ ಪ್ರಾರ್ಥನೆ ನಡೆಯುವುದು. ಕಾರ್ಯಕ್ರಮದ ಉದ್ಘಾಟನೆಯನ್ನು ಕೆ.ಹೆಚ್. ವಿಜಯಕುಮಾರ್ ನೆರವೇರಿಸುವರು. ಅಧ್ಯಕ್ಷತೆಯನ್ನು ದೇವರಮನೆ ಶಿವಕುಮಾರ್ ವಹಿಸುವರು.

ಮುಖ್ಯ ಅತಿಥಿಗಳು : ಮಾಲತೇಶರಾವ್ ಜಾಧವ್, ಕೆ. ನಾಗರಾಜ್, ಡಾ. ಕೆ.ಕೆ. ಪ್ರಕಾಶ್, ಡಾ. ನಿಂಗರಾಜ್ ನಾಯ್ಕ, ಗ್ಯಾನಪ್ಪ, ವಿನಾಯಕ್ ಪೈಲ್ವಾನ್, ಶ್ರೀಮತಿ ಅನ್ನಕ್ಕ ಲೆಂಕಣ್ಣನವರ್, ನಂಜುಂಡಸ್ವಾಮಿ ಕೆ.ಬಿ., ಶ್ರೀಮತಿ ರುದ್ರಾಕ್ಷಿಬಾಯಿ, ಟಿ.ಕೆ. ಕರಿಬಸಪ್ಪ, ಅಜ್ಜಂಪುರ ಶೆಟ್ರು ಮುತ್ತಣ್ಣ, ಡಾ. ಸಂರಕ್ಷ ಶೆಟ್ಟಿ, ಡಾ. ವಿನುತ್‌ಕುಮಾರ್ ಶೆಟ್ಟಿ, ಎಂ. ಸಿದ್ದಲಿಂಗಪ್ಪ

ಕಾರ್ಯಕ್ರಮದಲ್ಲಿ ಶ್ರೀ ಶಿವಬಸವಸ್ವಾಮಿ ಪಿ. ಚಿರಂತಿಮಠ (ಕಾಡಶೆಟ್ಟಿಹಳ್ಳಿ) ಅವರು ನುಡಿನಮನ ಸಲ್ಲಿಸುವರು.

# ಕಾಮಗಾರಿಗಳ ವಿಳಂಬ, ಲೋಪಕ್ಕೆ ಬಿಜೆಪಿ ಕಾರಣ




ಜಿಲ್ಲಾ ಕಾಂಗ್ರೆಸ್ ಆರೋಪ

ದಾವಣಗೆರೆ, ಮಾ.5- ನಗರದಲ್ಲಿ ಈ ಹಿಂದೆ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಮತ್ತು ಎಸ್.ಎಸ್. ಮಲ್ಲಿಕಾರ್ಜುನ್ ಅವರು ಸಚಿವರಾಗಿದ್ದ ವೇಳೆ 'ಸ್ಮಾರ್ಟ್ ಸಿಟಿ' ಮತ್ತು 'ಜಲಸಿರಿ'ಯಂತಹ ಯೋಜನೆಗಳನ್ನು ತಂದಿದ್ದು, ಇಂದು ಆ ಕಾಮಗಾರಿಗಳು ನಿಧಾನ ಗತಿಯಲ್ಲಿ ಸಾಗಿ, ಭಾರೀ ಲೋಪದಿಂದ ಕೂಡಿವೆ. ಇದಕ್ಕೆ ಆಡಳಿತಾರೂಢ ಬಿಜೆಪಿಗರೇ ಕಾರಣ ಎಂದು ಕಾಂಗ್ರೆಸ್ ಆರೋಪಿಸಿದೆ.

ನಗರದ 24ನೇ ವಾರ್ಡ್‌ನ ಮೋತಿ ವೀರಪ್ಪ ಶಾಲೆ ಹಿಂಭಾಗದಲ್ಲಿ ಜಲಸಿರಿ ಮತ್ತಿತರೆ ಕಾಮಗಾರಿಗಳು ಕಳೆದ 3-4 ತಿಂಗಳುಗಳಿಂದ ಆರಂಭಿಸಿದ್ದರೂ ಸಹ ಶೇ.25ರಷ್ಟು ಕಾಮಗಾರಿಯೂ ನಡೆಯದ ಹಿನ್ನೆಲೆಯಲ್ಲಿ ಸ್ಥಳೀಯ ಮುಖಂಡರ ಮನವಿ ಮೇರೆಗೆ ಕಾಂಗ್ರೆಸ್ ಪಕ್ಷದ ಮುಖಂಡರು ಇಂದು ಸ್ಥಳಕ್ಕೆ ತೆರಳಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಮಹಾನಗರ ಪಾಲಿಕೆ ವಿಪಕ್ಷ ನಾಯಕ ಜಿ.ಎಸ್. ಮಂಜುನಾಥ್, ಸದಸ್ಯ ಎ. ನಾಗರಾಜ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಕೆ. ಜಿ.ಶಿವಕುಮಾರ್, ಅಯೂಬ್ ಪೈಲ್ವಾನ್, ಎಂ.ಆರ್. ಮಾಲತೇಶ್, ಸಿದ್ದೇಶ್ ಸ್ಥಳಕ್ಕೆ ಭೇಟಿ ನೀಡಿದ್ದು, ಸ್ಥಳೀಯರಾದ ಅಣಬೇರು ರಾಜಣ್ಣ ಅವರು ಕಾಮಗಾರಿ ವಿಳಂಬದ ಬಗ್ಗೆ ದೂರು ನೀಡಿದರು.

24ನೇ ವಾರ್ಡ್‌ನ ಪಾಲಿಕೆ ಸದಸ್ಯ ಪ್ರಸನ್ನಕುಮಾರ್ ಅವರೇ ಕಾಮಗಾರಿಯ ಗುತ್ತಿಗೆದಾರರಾಗಿರುವುದರಿಂದ ಈ ಭಾಗದಲ್ಲಿ ಕಾಮಗಾರಿ ವಿಳಂಬವಾಗುವುದರ ಜೊತೆಗೆ ಕಾಮಗಾರಿ ಗುಣಮಟ್ಟದಲ್ಲೂ ಸಹ ಲೋಪವೆಸಲಾಗುತ್ತಿದೆ. ಇದೇ ರೀತಿ ಬಿಜೆಪಿಯ ಬಹುತೇಕ ಪಾಲಿಕೆ ಸದಸ್ಯರುಗಳು ತಾವೇ ಕಾಮಗಾರಿಗಳನ್ನು ನಡೆಸುತ್ತಿದ್ದಾರೆ. ಇಲ್ಲದಿದ್ದರೆ ಗುತ್ತಿಗೆದಾರರಿಂದ ಹಣ ಕೇಳುತ್ತಿರುವುದರಿಂದ ಕಾಮಗಾರಿಗಳು ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ಆಪಾದಿಸಿದರು.

ನಗರದ ಬಹುತೇಕ ಕಡೆಗಳಲ್ಲಿ ಸ್ಮಾರ್ಟ್ ಸಿಟಿ ಮತ್ತು ಜಲಸಿರಿ ಕಾಮಗಾರಿಗಳೇ ನಡೆಯತ್ತಿವೆ. ಆದರೆ ಬಿಜೆಪಿಗರ ಹಣದ ಹಪಾಹಪಿಗೆ ಕಾಮಗಾರಿ ವಿಳಂಬವಾಗುತ್ತಿವೆ. ಕೆಲವು ಕಡೆಗಳಲ್ಲಿ ಕಾಮಗಾರಿಗಳು ಲೋಪದಿಂದ ಕೂಡಿದ್ದು, ಈ ಬಗ್ಗೆ ಜಿಲ್ಲಾಡಳಿತ ಮಧ್ಯೆ ಪ್ರವೇಶಿಸಿ, ತ್ವರಿತಗತಿಯಲ್ಲಿ ಗುಣಮಟ್ಟದ ಕಾಮಗಾರಿಗಳನ್ನು ನಡೆಸಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

## ನೀಲಾನಹಳ್ಳಿಯಲ್ಲಿ ನಾಡಿದ್ದು ಆಂಜನೇಯ ರಥೋತ್ಸವ



ದಾವಣಗೆರೆ ತಾಲ್ಲೂಕಿನ ನೀಲಾನಹಳ್ಳಿ ಶ್ರೀಕ್ಷೇತ್ರದಲ್ಲಿ ಇದೇ ದಿನಾಂಕ 8 ರ ಮಂಗಳವಾರ ಆಂಜನೇಯ ದೇವರ ರಥೋತ್ಸವ ಹಾಗೂ ಸಂಜೆ ಕಾರಣಿಕ ನಡೆಯುವುದು.

ಇಂದು ರಾತ್ರಿ 9.10 ಕ್ಕೆ ಕಂಕಣಧಾರಣೆ, ನಾಳೆ ಸೋಮವಾರ ಸಂಜೆ ದೊಡ್ಡಬಾತಿಯ ಶ್ರೀ ಬೀರಲಿಂಗೇಶ್ವರ ದೇವರ ಆಗಮನ, ಅಂದು ರಾತ್ರಿ ಅರಿಶಿಣ ಎಣ್ಣೆ ಕಾರ್ಯಕ್ರಮ ನಡೆಯುವುವು.

ದಿನಾಂಕ 8 ರ ಮಂಗಳವಾರ ಬೆಳಿಗ್ಗೆ 8.30 ಕ್ಕೆ ರಥೋತ್ಸವ ನಡೆಯಲಿದೆ. ಅಂದು ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 1.30 ರವರೆಗೆ ಭಕ್ತಾದಿಗಳು ಹರಕೆ ತೀರಿಸುವರು. ಸಂಜೆ 4.30 ಕ್ಕೆ ಬೇಟೆ ಆಡುವುದು, 5.30 ಕ್ಕೆ ಮುಳ್ಳುಗದ್ದಿಗೆ ಏರುವುದು. ಸಂಜೆ 6.30 ಕ್ಕೆ ಕಾರಣಿಕ ನುಡಿಯುವುದು. 7.30 ಕ್ಕೆ ಭೂತ ಸೇವೆ, 8.30 ಕ್ಕೆ ಓಕಳಿ ಕಾರ್ಯ, ರಾತ್ರಿ 9.30 ಕ್ಕೆ ಗಂಗೆ ಪೂಜೆ ನೆರವೇರಿಸಲಾಗುವುದು ಎಂದು ದೇವಸ್ಥಾನದ ಕನ್ವೀನರ್ ತಿಳಿಸಿದ್ದಾರೆ.

## ಹರಪೀಠದಲ್ಲಿ ಇಂದು ಪಂಚಮಸಾಲಿ ಸಮಾಜದ ನೂತನ ಕಾರ್ಯಕಾರಿ ಸಮಿತಿ ಪದಗ್ರಹಣ



ಹರಿಹರ, ಮಾ.5- ತಾಲ್ಲೂಕಿನ ಪಂಚಮಸಾಲಿ ಹರಪೀಠದಲ್ಲಿ ನಾಳೆ ದಿನಾಂಕ 6ರ ಭಾನುವಾರ ಬೆಳಿಗ್ಗೆ 11 ಕ್ಕೆ ರಾಜ್ಯ, ಜಿಲ್ಲಾ ಹಾಗು ತಾಲ್ಲೂಕು ನೂತನ ಅಧ್ಯಕ್ಷರುಗಳು ಸೇರಿದಂತೆ ರಾಜ್ಯ ಕಾರ್ಯಕಾರಿ ಸಮಿತಿಯ ಪದಗ್ರಹಣ ಸಮಾರಂಭ ನಡೆಯಲಿದೆ ಎಂದು ಪಂಚಮಸಾಲಿ ಸಮಾಜದ ರಾಜ್ಯಾಧ್ಯಕ್ಷ ಜಿ.ಪಿ. ಪಾಟೀಲ್ ತಿಳಿಸಿದ್ದಾರೆ.

ಸಮಾರಂಭದ ವೇದಿಕೆಯ ಸಿದ್ಧತೆಯನ್ನು ಇಂದು ಪರಿಶೀಲಿಸಿದ ಸಂದರ್ಭದಲ್ಲಿ ತಮ್ಮನ್ನು ಭೇಟಿಯಾದ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ಹರಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಸಮಾರಂಭ ದಲ್ಲಿ 15 ಜಿಲ್ಲಾ ಅಧ್ಯಕ್ಷರು, 75 ಕ್ಕೂ ಹೆಚ್ಚು ತಾಲ್ಲೂಕು ಅಧ್ಯಕ್ಷರನ್ನೊಳ ಗೊಂಡಂತೆ ಸಮಿತಿ ಪದಾಧಿಕಾರಿಗಳು, ರಾಜ್ಯ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಸೇರಿದಂತೆ ಸಮಾಜದಿಂದ ಆಯ್ಕೆಗೊಂಡ 1500 ಕ್ಕೂ ಹೆಚ್ಚು ಪದಾಧಿಕಾರಿಗಳು ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಅವರು ವಿವರಿಸಿದರು.

ಈ ಸಂದರ್ಭದಲ್ಲಿ ನಿಕಟಪೂರ್ವ ರಾಜ್ಯಾಧ್ಯಕ್ಷರುಗಳಾದ ಬಾವಿ ಬೆಟ್ಟಪ್ಪ, ಬಸವರಾಜ ದಿಂಡೂರ್, ಹರಪೀಠದ ಧರ್ಮದರ್ಶಿ ಬಿ.ಸಿ. ಉಮಾಪತಿ ಸಮಾಜದ ಪ್ರಮುಖರಾದ ಸೋಮನಗೌಡ ಪಾಟೀಲ್, ಬಿ.ಲೋಕೇಶ್, ಪಟ್ಟಣಶೆಟ್ಟಿ ಪರಮೇಶ್, ಜ್ಯೋತಿ ಪ್ರಕಾಶ್ ಇನ್ನಿತರರಿದ್ದರು.

## ಕರಿಬಸವೇಶ್ವರ ಸ್ವಾಮಿ ಪುಣ್ಯಕ್ಷೇತ್ರದಲ್ಲಿ ವಿಶೇಷ ಪೂಜೆಗಳು

ದಾವಣಗೆರೆ - ಹಳೇ ಕುಂದುವಾಡದ ಶ್ರೀ ಸದ್ಗುರು ಕರಿಬಸವೇಶ್ವರ ಸ್ವಾಮಿ ಪುಣ್ಯಕ್ಷೇತ್ರದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಇಂದಿನಿಂದ ಇದೇ ದಿನಾಂಕ 8 ರವರೆಗೆ ವಿಶೇಷ ಪೂಜೆಗಳು ನಡೆಯಲಿದ್ದು, ದಿನಾಂಕ 9ರಂದು ಪಳ್ಳಾರ ಪ್ರಸಾದ ನಡೆಯುವುದು.

## ನಗರದಲ್ಲಿ ಇಂದು ಆನ್‌ಲೈನ್ ವಿದ್ಯಾರ್ಥಿ ವೇತನ ಪರೀಕ್ಷೆ

ಲಾಥೋರ್ ಅಕಾಡೆಮಿ (ಚಾರ್ಟರ್ಡ್ ಅಕೌಂಟೆನ್ಸಿ ಕೋಚಿಂಗ್ ಇನ್‌ಸ್ಟಿಟ್ಯೂಟ್) ಯಿಂದ ಪ್ರಸ್ತುತ ದ್ವಿತೀಯ ಪಿಯುಸಿ ಕಾಮರ್ಸ್ ಓದುತ್ತಿರುವ ವಿದ್ಯಾರ್ಥಿಗಳಿಗೆ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 12ರವರೆಗೆ ಆನ್‌ಲೈನ್ ವಿದ್ಯಾರ್ಥಿ ವೇತನ ಪರೀಕ್ಷೆ ನಡೆಸಲಾಗುತ್ತಿದೆ. ಪ್ರಥಮ ಮತ್ತು ದ್ವಿತೀಯ ಪಿಯುಸಿ ಪಠ್ಯಕ್ರಮದ ಆಧಾರದ ಮೇಲೆ ಆನ್‌ಲೈನ್ ಎಂಸಿಕ್ಯೂ ಪರೀಕ್ಷೆಯಾಗಿದ್ದು ಅಕೌಂಟೆನ್ಸಿ ಮತ್ತು ಸಾಮಾನ್ಯ ಇಂಗ್ಲಿಷ್ ಜ್ಞಾನದ ಬಗ್ಗೆ ಪರೀಕ್ಷೆ ನಡೆಸಲಾಗುವುದು. https://forms.gle/bvBcSYYFJi4hwsYq8 ಈ ಲಿಂಕ್ ಉಪಯೋಗಿಸಿ ನೋಂದಣಿ ಮಾಡಿಕೊಳ್ಳಬಹುದು. ವಿವರಗಳಿಗೆ 8123345577 ಕ್ಕೆ ಸಂಪರ್ಕಿಸಬಹುದಾಗಿದೆ.

## ಕೈದಾಳೆ : ನಾಳೆ ಶ್ರೀ ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವ

ದಾವಣಗೆರೆ, ಮಾ.5- ಕೈದಾಳೆ ಗ್ರಾಮದ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ಮಹಾ ರಥೋತ್ಸವ ನಾಳೆ ದಿನಾಂಕ 7ರಂದು ಜರುಗಲಿದೆ.

ಅಂದು ಬೆಳಿಗ್ಗೆ 8.30 ರಿಂದ 9.30ರವರೆಗೆ ರಥೋತ್ಸವ ಜರುಗಲಿದ್ದು, ಮಧ್ಯಾಹ್ನ 1 ರಿಂದ 5ರವರೆಗೆ ಜವಳ ಕಾರ್ಯಕ್ರಮ, ಸಂಜೆ 5ರಿಂದ ಅಗ್ನಿಕುಂಡ ಪೂಜೆ ಮತ್ತು ಓಕಳಿ ಹಾಗೂ ರಾತ್ರಿ 9.30ರಿಂದ ಹೂವಿನ ಅಡ್ಡಪಲ್ಲಕ್ಕಿ ಉತ್ಸವ, ವೀರಗಾಸೆ, ಮುಂಜಾನೆ 2.30ಕ್ಕೆ ಅಗ್ನಿಕುಂಡ ಪ್ರವೇಶ ಇರಲಿದೆ. ನಾಡಿದ್ದು ದಿನಾಂಕ 8 ರಂದು ಸಂಜೆ 5 ಗಂಟೆಗೆ ಶ್ರೀ ಸ್ವಾಮಿಯ ದಿಬ್ಬಣ ಕಾರ್ಯಕ್ರಮ ನೆರವೇರಲಿದ್ದು, ಅಂದು ರಾತ್ರಿ 9 ಗಂಟೆಗೆ ರಸಮಂಜರಿ ಕಾರ್ಯಕ್ರಮ ನಡೆಯಲಿದೆ.

## ವಾಣಿಜ್ಯ – ವಸತಿ ನಿರ್ಮಾಣದಲ್ಲಿ ಶೇ.10ರಷ್ಟು ಜಾಗ ಹಸಿರಿಗೆ ಮೀಸಲು

ನವದೆಹಲಿ, ಮಾ. 5 – ಪ್ರತಿ 80 ಚದುರ ಮೀಟರ್‌ಗೆ ಒಂದು ಮರ ನೆಡುವ ಮೂಲಕ ವಾಣಿಜ್ಯ ಹಾಗೂ ವಸತಿ ನಿರ್ಮಾಣ ಸ್ಥಳಗಳಲ್ಲಿ ಶೇ.10ರಷ್ಟು ಜಾಗವನ್ನು ಹಸಿರಿಗೆ ಮೀಸಲಿರಿಸಲು ಕೇಂದ್ರ ಪರಿಸರ ಇಲಾಖೆ ಪ್ರಸ್ತಾಪಿಸಿದೆ. ಕರಡು ಅಧಿಸೂಚನೆ ಪ್ರಕಟಿಸಿರುವ ಸಚಿವಾಲಯ, 60 ದಿನಗಳ ಒಳಗೆ ಜನರು ಪ್ರತಿಕ್ರಿಯೆ ನೀಡಬೇಕೆಂದು ಕೇಳಿದೆ.

ಹೊಸ ಕಟ್ಟಡಗಳ ನಿರ್ಮಾಣ ಹಾಗೂ ಈಗಿರುವ ಕಟ್ಟಡಗಳ ವಿಸ್ತರಣೆ, ನವೀಕರಣ ಇಲ್ಲವೇ ದುರಸ್ತಿ ಸಂದರ್ಭದಲ್ಲಿ ನಿಯಮಗಳು ಅನ್ವಯವಾಗಲಿವೆ. 5 ಸಾವಿರ ಚದುರ ಮೀಟರ್ ವಿಸ್ತಾರದ ಪ್ರದೇಶದಲ್ಲಿ ನಿರ್ಮಾಣವಾಗುವ ಕಟ್ಟಡಗಳಿಗೆ ಈ ನಿಯಮ ಅನ್ವಯವಾಗಲಿದೆ.

## ರೈತರ ಮಕ್ಕಳಿಗೆ ತೋಟಗಾರಿಕೆ ತರಬೇತಿ

ದಾವಣಗೆರೆ ಮಾ.5 - ತೋಟಗಾರಿಕೆ ಇಲಾಖೆ ವತಿಯಿಂದ ಚಿತ್ರದುರ್ಗ ಜಿಲ್ಲೆಯ ಐನಹಳ್ಳಿ ತೋಟಗಾರಿಕೆ ಕ್ಷೇತ್ರದಲ್ಲಿ ರೈತರ ಮಕ್ಕಳಿಗೆ ತೋಟಗಾರಿಕೆ ತರಬೇತಿ ನಡೆಯಲಿದೆ. ಅರ್ಜಿ ನಮೂನೆಯನ್ನು ಇದೇ ದಿನಾಂಕ 15 ರಿಂದ ಏಪ್ರಿಲ್ 16 ರವರೆಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ) ದಾವಣಗೆರೆ ಇವರ ಕಚೇರಿಯಲ್ಲಿ/ಇಲಾಖಾ ವೆಬ್ ಸೈಟ್ www.horticulture.kar.nic.in ನಲ್ಲಿ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ತೋಟಗಾರಿಕೆ ಉಪನಿರ್ದೇಶಕರು (ಜಿಪಂ) ಅಥವಾ ಹಿರಿಯ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ) ದಾವಣಗೆರೆ ಕಚೇರಿಗೆ ಸಲ್ಲಿಸಬಹುದು. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-230049.

## ನಗರದಲ್ಲಿ ಇಂದು ಬಯಲಾಟ ಶಿಬಿರ

ಕರ್ನಾಟಕ ಬಯಲಾಟ ಅಕಾಡೆಮಿ (ಬಾಗಲಕೋಟೆ) ಹಾಗೂ ಶ್ರೀ ಅಕ್ಕಮಹಾದೇವಿ ಮಹಿಳಾ ಸಾಂಸ್ಕೃತಿಕ ಕಲಾಸಂಘದ ಸಂಯುಕ್ತಾಶ್ರಯದಲ್ಲಿ ಎಂ.ಸಿ.ಸಿ ಬಿ ಬ್ಲಾಕ್‌ನಲ್ಲಿರುವ ಸೇವಾದಳದ ಸಭಾಂಗಣದಲ್ಲಿ ಇಂದು ಬಯಲಾಟ (ದೊಡ್ಡಾಟ) ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಯರಗುಂಟೆ ಶ್ರೀ ಪರಮೇಶ್ವರ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಹವ್ಯಾಸಿ ಗ್ರಾಮೀಣ ವಿವಿಧ ಕಲಾವಿದರ ಒಕ್ಕೂಟದ ಅಧ್ಯಕ್ಷ ಬಿ.ಇ. ತಿಪ್ಪೇಸ್ವಾಮಿ ಉದ್ಘಾಟನೆ ಮಾಡುವರು. ಮುಖ್ಯ ಅತಿಥಿಗಳಾಗಿ ಜಾನ ಪದ ಕಲಾವಿದರಾದ ಎರೇಹಳ್ಳಿ ಕೆ.ನೀಲಮ್ಮ, ಪುಣ್ಯ ಭೂಮಿಯ ಸಂಪಾದಕ ಬಸವರಾಜ ಐರಣಿ ಆಗಮಿಸುವರು.

## ಗ್ರಾಮೀಣ ಪ್ರದೇಶಗಳಲ್ಲಿ ಇಂದು ವಿದ್ಯುತ್ ವ್ಯತ್ಯಯ

ದಾವಣಗೆರೆ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ ದಾವಣಗೆರೆ ಹಾಗೂ ಚನ್ನಗಿರಿ ತಾಲ್ಲೂಕಿನ ಈ ಕೆಳಕಂಡ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ದಾವಣಗೆರೆ ನಗರದ ವಿದ್ಯಾನಗರ, ರಂಗನಾಥ ಬಡಾವಣೆ, ತರಳಬಾಳು ಬಡಾವಣೆ, ಸರಸ್ವತಿ ನಗರ, ಶಿವಕುಮಾರಸ್ವಾಮಿ ಬಡಾವಣೆ, ಚಿಕ್ಕಮ್ಮಣ್ಣಿ ದೇವರಾಜ ಅರಸ್ ಬಡಾವಣೆ, ಲೋಕಿಕೆರೆ ರಸ್ತೆ ಇಂಡಸ್ಟ್ರೀಯಲ್ ಏರಿಯಾ, ಎಸ್.ಎಸ್. ಹೈಟೆಕ್ ಆಸ್ಪತ್ರೆ, ರಾಮನಗರ, ವಿವೇಕಾನಂದ ನಗರ, ಶಾಮನೂರು, ಜೆ.ಹೆಚ್. ಪಟೇಲ್ ನಗರ, ಹಾಗೂ ಸುತ್ತಮುತ್ತಲಿನ ಪ್ರದೇಶಗಳು ಹಾಗೂ ಗ್ರಾಮೀಣ ಭಾಗದ 6ನೇ ಮೈಲಿ, ತೋಳಹುಣಸೆ, ಬೆಳವನೂರು, ನಾಗನೂರು, ತುರ್ಚಘಟ್ಟ, ಯಲ್ಲಮ್ಮ ಮಿಲ್ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ಕುಕ್ಕುವಾಡ ಕೋಲಕುಂಟೆ, ಗಿರಿಯಾಪುರ, ಕೈದಾಳೆ, ಹದಡಿ, ಕಲ್ಪಂಡೆ, ಲೋಕಿಕೆರೆ, ಬಲ್ಲೂರು, ಕನಗೊಂಡನಹಳ್ಳಿ, ಮತ್ತಿ, ನಾಗರಸನಹಳ್ಳಿ, ಹೂವಿನಮಡು ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ಶ್ಯಾಗಲೆ, ಕಂದಗಲ್ಲು, ಕೋಡಿಹಳ್ಳಿ, ಗೋಣಿವಾಡ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ದೊಡ್ಡ ಮಲ್ಲಾಪುರ, ಸಿದ್ದನಮಠ, ಕಾಕನೂರು, ಸಂತೇಬೆನ್ನೂರು, ಬೆಳ್ಳಿಗನೂಡು, ನಿಂಬಾಪುರ, ಅರಳಿಕಟ್ಟೆ, ತಣಿಗೆರೆ, ಚಿಕ್ಕಬೆನ್ನೂರು, ಹಿರೇಕೋಗಲೂರು, ದೊಡ್ಡಬ್ಬಿಗೆರೆ, ಅಬ್ಬಿಗೆರೆ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ಕೆರೆಬಿಳಚಿ, ಹೊಸೂರು, ಚನ್ನಾಪುರ, ಆಲೂರು, ಸೋಮಲಾಪುರ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ಬಸವಾಪಟ್ಟಣ, ಹರ್ಲೀ ಪುರ, ಹೊಸಹಳ್ಳಿ, ಮರಬನಹಳ್ಳಿ, ಚಿರಡೋಣಿ, ಯಲ್ಲೋದಹಳ್ಳಿ ಪುಣ್ಯಸ್ಥಳ, ಸಂಗಾಹಳ್ಳಿ, ಸಿದ್ದೇಶ್ವರ ನಗರ, ನಿಲೋಗಲ್, ಕಂಚುಗಾರನಹಳ್ಳಿ, ದಾಗಿನಕಟ್ಟೆ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ತ್ಯಾವಣಿಗಿ, ನಲ್ಕುದುರೆ, ದೊಡ್ಡಘಟ್ಟ, ಕತ್ತಲಗೆರೆ, ಕಾರಿಗನೂರು, ಬೆಳಲಗೆರೆ, ಹರೆಹಳ್ಳಿ, ನವಿಲೇಹಾಳು, ಕಬ್ಬಳ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

## ನಗರದಲ್ಲಿ ಇಂದು ಗೃಹೋತ್ಪನ್ನ ವಸ್ತುಗಳ ಪ್ರದರ್ಶನ

ವನಿತಾ ಸಮಾಜ, ವನಿತಾ ಸಹಾಯ ಸಮಿತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಸಾಂಸ್ಕೃತಿಕ ಸೌರಭ ಹಾಗೂ ಸೇವಾ ಕಾರ್ಯಕ್ರಮವನ್ನು ಇಂದು ಸಂಜೆ 6 ಗಂಟೆಗೆ ಗುಂಡಿ ಮಹದೇವಪ್ಪ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದೆ.

ಮಾಜಿ ಸಚಿವೆ ಡಾ. ನಾಗಮ್ಮ ಕೇಶವಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಕಿರುತೆರೆ ಹಿರಿಯ ಕಲಾವಿದೆ ವಿದ್ಯಾ ಮೂರ್ತಿ, ಉದಯೋನ್ಮುಖ ಕಲಾವಿದೆ ಟಿ.ವಿ.ಮಲ್ಲಿಕಾ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಸುದ್ದಿಗೋಷ್ಠಿಯಲ್ಲಿ ವನಿತಾ ಸಮಾಜದ ಅಧ್ಯಕ್ಷೆ ಗೀತಾ ಪ್ರಸಾದ್ ತಿಳಿಸಿದರು.

ಮಹಿಳೆಯರಿಂದ ಸಂಗೀತ, ನೃತ್ಯ, ಹಾಸ್ಯ, ಉಡುಗೆ-ತೊಡುಗೆ, ಅಡುಗೆ ಆಟ ಮುಂತಾದ ಸ್ಪರ್ಧೆಗಳು ಜರುಗಲಿವೆ. ಪ್ರತಿ ಸುತ್ತಿನಲ್ಲೂ 20 ಬಹುಮಾನ ನೀಡಲಾಗುವುದು. ಬೆಳಗ್ಗೆ 11 ರಿಂದ ರಾತ್ರಿ 8ರವರೆಗೆ ಗೃಹೋತ್ಪನ್ನ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳ ಇರುತ್ತದೆ.

## ನಗರದಲ್ಲಿ ಇಂದು ಗ್ಲಾಕೋಮಾ ಚಿಕಿತ್ಸೆ

ವಿಶ್ವ ಗ್ಲಾಕೋಮಾ ದಿನದ ಅಂಗವಾಗಿ ಎಸ್.ಎಸ್. ವೈದ್ಯಕೀಯ ಮಹಾ ವಿದ್ಯಾಲಯದಲ್ಲಿ ಗ್ಲಾಕೋಮಾ ಜಾಗೃತಿ ಸಪ್ತಾಹ ಹಾಗೂ ಉಚಿತ ಪರೀಕ್ಷೆ ಮತ್ತು ಚಿಕಿತ್ಸೆಯನ್ನು ಇಂದಿನಿಂದ ದಿನಾಂಕ 12 ರವರೆಗೆ ಹಮ್ಮಿಕೊಳ್ಳಲಾಗಿದೆ.


**ಅರಸಿ ಕನ್ಸಲ್ಟೆನ್ಸಿ ಸರ್ವೀಸಸ್**

ನಮ್ಮಲ್ಲಿ ಕಟ್ಟಡ ಪರವಾನಿಗೆ (ದಾವಣಗೆರೆ ಮಹಾನಗರ ಪಾಲಿಕೆ ಮತ್ತು DHUDA), ಬಿಲ್ಡಿಂಗ್ ಪ್ಲಾನ್ (ವಾಸ್ತು ಪ್ರಕಾರ), ಎಸ್ಟಿಮೇಷನ್, ಕನ್‌ಸ್ಟ್ರಕ್ಷನ್ ಮತ್ತು ಮೆಟೀರಿಯಲ್ ಕಾಂಟ್ರ್ಯಾಕ್ಟ್ ಹಾಗೂ ಅಲಿನೇಷನ್, ಲೇಔಟ್ ಪ್ಲಾನ್ ಮತ್ತು ಅಭಿವೃದ್ಧಿ (Development) ಮಾಡಿಕೊಡಲಾಗುವುದು.

ಸಂಪರ್ಕಿಸಿ : ಪ್ರಿಯಾಂಕ ಜಿ.ಪಿ., ಇಂಜಿನಿಯರ್
+91 70190 70400

2ನೇ ಮೇನ್, ಪಿ.ಜೆ. ಬಡಾವಣೆ, ಸಿ.ಜಿ. ಆಸ್ಪತ್ರೆ ರಸ್ತೆ, ವಿಜಯ ಹೋಟೆಲ್ ಎದುರು, ದಾವಣಗೆರೆ-4.



**ಟಗರುಗಳು ಮಾರಾಟಕ್ಕಿವೆ (ಗಂಡು ಕುರಿಗಳು)**



ನಗರದ ಶ್ರೀ ದುರ್ಗಮ್ಮ ಜಾತ್ರೆಯ ಪ್ರಯುಕ್ತ ನಮ್ಮಲ್ಲಿ ಜವಾರಿ ತಳಿಯ ಟಗರುಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ.
ಸಂಪರ್ಕಿಸಿ :
ಶ್ರೀ ರಂಗನಾಥ ಫಾರಂ
ಕೆರೆಯಾಗಳಹಳ್ಳಿ, ದಾವಣಗೆರೆ ತಾ॥.
ಮೊ.: 9945252451
9986033035, 9980432541



**COMMERCIAL AREA FOR RENT (1050 SFT-FIRST FLOOR)**
2987/A, AMMA, J.C. Arcade, 7th Main, 3rd Cross, Opp. : Swimming Pool, Besides DRNK LAB, Davangere-577 004.
(Preferred for Offices, Library, Bank)
**HOUSE FOR RENT (FURNISHED-THIRD FLOOR)**
2987/A, Amma, J.C. Arcade, 7th Main, 3rd Cross Opp. : Swimming Pool, Davangere-4.
(Preferred PG Doctor's-Female)
Contact : 98801 93453, 98440 41620



**I SWIPE TECHNOLOGIES PVT LTD**
**WE ARE HIRING**
ALERT FOR WALK IN INTERVIEW
LOCATION - DAVANGERE CITY, DAVANGERE RURAL
JOB OPENINGS
Sales Executives and Promoters
Male & Female both applicable
Education II PUC and Any Degree
DATE : 07.03.2022 (Monday) TIMING : 10:00 AM TO 5:00 PM
I SWIPE TECHNOLOGIES PVT LTD
MAGGAN'S PLAZA PJ EXTENSION RAM & CO CIRCLE NEAR BANK OF BARODA, DAVANAGERE-2.
CONTACT : 95381 23450, 8497 851656



*Sri Sharadhamba Education Trust*
**SMARTKIDZ PATSHALA**
PLAY GROUP TO 5TH STD. ENGLISH MEDIUM SCHOOL
**TEACHERS WANTED**
♦ Nursery & Primary Teachers
Kannada, English, Hindi, Mathematics, Science, Social
Qualification : BA B.Ed (English Major)
B.Sc B.Ed(Science and Mathematics)
BA B.Ed (Kannad & Hindi)
♦ P.E. Teachers
♦ Aaya (House Keeping) ♦ Drivers
*English fluency is must.*
*Salary 10-18 Thousand*
Interview Date :
13.03.2022 & 20.03.2022 Sunday
Timings : 10.00 am to 4.00 pm
*Venue :*
SMARTKIDZ ENGLISH MEDIUM SCHOOL
*# 785/1/6, Hitech Hospital Road, Kalidasa Circle, Jayanagar 'B' Block, Nittuvalli, Davangere-4.*
WhatsApp: 99862 11344
Admissions Opened For the Academic Year 2022-23







## ಸಾರ್ವಜನಿಕ ಪತ್ರಿಕೆ ಪ್ರಕಟಣೆ

ದಿನಾಂಕ : 02.03.2022ರ ರಂದು ಇದೇ ಜನತಾವಾಣಿ ಪತ್ರಿಕೆಯಲ್ಲಿ ಸಾರ್ವಜನಿಕ ಪ್ರಕಟಣೆ ಮುದ್ರಣಗೊಂಡಿದ್ದು, ಅದರಲ್ಲಿ ಈ ಕೆಳಕಾಣಿಸಿದ ಸೊತ್ತಿಗೆ ಸಂಬಂಧಿಸಿದ ವಕೀಲರಾದ ಗೋಪಾಲ ಎಂ., ವಕೀಲರು, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ ಈ ಸಾರ್ವಜನಿಕ ಪ್ರಕಟಣೆಯ ಹಿನ್ನೆಲೆಯಲ್ಲಿ ಪ್ರತ್ಯುತ್ತರವಾಗಿ ಈ ಸಾರ್ವಜನಿಕ ಪ್ರಕಟಣೆಯನ್ನು ನೀಡಲಾಗಿದೆ.

ನನ್ನ ಕಕ್ಷಿದಾರರಾದ ಶ್ರೀ ಅಂಜಿನಪ್ಪ ಬಿನ್ ಬಸಪ್ಪ, ವಾಸ ಹೊಸ ಕುಂದುವಾಡ, ಇವರು ಈ ಕೆಳಕಂಡ ಸೊತ್ತಿನ ಮಾಲೀಕರಾಗಿದ್ದು, ಈ ಹಿಂದಿನ ಪ್ರಕಟಣೆಯಲ್ಲಿ ತಿಳಿಸಿದಂತೆ ವಸಂತಮ್ಮ ಕೋಂ ವೀರಭದ್ರಪ್ಪ ಇವರಿಂದ ಈ ಷೆಡ್ಯೂಲ್ ಸೊತ್ತನ್ನು ಪಿ. ಪ್ರಕಾಶ್ ಬಿನ್ ಪರಸಪ್ಪನವರು ಖರೀದಿಸುತ್ತೇನೆ. ಯಾರಾದರೂ ಈ ಸೊತ್ತಿಗೆ ಸಂಬಂಧಪಟ್ಟವರು ಅಥವಾ ಈ ಸೊತ್ತಿಗೆ ಸಂಬಂಧಪಟ್ಟ ದಾಖಲೆಗಳು ಕ್ರಯ, ಭೋಗ್ಯ, ಇತರೆ ಯಾವುದೇ ದಾಖಲೆಗಳಿದ್ದರೆ ನನಗೆ ನೀಡಬೇಕು ಎಂದು ಸಾರ್ವಜನಿಕ ಪ್ರಕಟಣೆಯಲ್ಲಿ ಇಚ್ಛೆ ವ್ಯಕ್ತಪಡಿಸಿರುತ್ತೀರಿ. ಈ ಸದರಿ ಷೆಡ್ಯೂಲ್ ಸೊತ್ತಿನ ಮೂಲ ಮಾಲೀಕ ಸುಂಕಪ್ಪ. ಈ ಸೊತ್ತನ್ನು ನೋಂದಾಯಿತ ಕ್ರಯಪತ್ರದ ಮೂಲಕ ಖರೀದಿ ಮಾಡಿ ಸ್ವಾಧೀನಾನುಭವ ಹೊಂದಿರುತ್ತಾರೆ. ತದನಂತರ ಅವರ ವಾರಸುದಾರರಾದ ನನ್ನ ಕಕ್ಷಿದಾರರಾದ ಅಂಜಿನಪ್ಪ ಮತ್ತು ಅವರ ಕುಟುಂಬಸ್ಥರು ಸದರಿ ಸೊತ್ತಿನ ಸ್ವಾಧೀನಾನುಭವ ಹೊಂದಿರುತ್ತಾರೆ. ಆದರೆ, ನೀವು ಹೇಳಿರುವ ವಸಂತ ಕೋಂ ವೀರಭದ್ರಪ್ಪ ಇವರು ನೀವು ನಿಮ್ಮ ಪತ್ರಿಕೆ ಪ್ರಕಟಣೆಯಲ್ಲಿ ತೋರಿಸಿರುವ ಮತ್ತು ಅದರಲ್ಲಿ ಕೆಳಗೆ ತೋರಿಸಿದ ಷೆಡ್ಯೂಲ್ ಒಂದೇ ಆಗಿದ್ದು, ಸದರಿ ವಸಂತಮ್ಮ ಕೋಂ ವೀರಭದ್ರಪ್ಪನವರು ಈ ಕೆಳಗೆ ಕಾಣಿಸಿದ ಸೊತ್ತಿನ ಮಾಲೀಕರಾಗಿರುವುದಿಲ್ಲ. ಆದರೂ ಸಹಿತ ಸುಳ್ಳು ಪತ್ರವನ್ನು ಸೃಷ್ಟಿಸಿಕೊಂಡು ಮಾರಾಟ ಮಾಡಲು ಯತ್ನಿಸಿದ್ದು. ಮೂಲ ಮಾಲೀಕರಾದ ನನ್ನ ಕಕ್ಷಿದಾರರ ಗಮನಕ್ಕೆ ಬಂದಿರುತ್ತದೆ ಮತ್ತು ವಸಂತಮ್ಮನವರು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಮಾರಾಟ ಮಾಡುವುದು ಮತ್ತು ಸುಳ್ಳು ದಾಖಲೆ ಎಂದು ಗೊತ್ತಿದ್ದರೂ ಖರೀದಿ ಮಾಡುವುದು, ಕ್ರಿಮಿನಲ್ ದಂಡ ಪ್ರಕ್ರಿಯೆ ಸಮಿತಿಯಡಿ ಅಪರಾಧವಾಗುತ್ತದೆಂದು ಹೆಚ್ಚಿನ ಮಾಹಿತಿಗೆ ಈ ಕೆಳಕಾಣಿಸಿದ ನಮ್ಮ ಕಕ್ಷಿದಾರರಿಗೆ ಅಥವಾ ಅವರ ವಕೀಲರಿಗೆ ಸಂಪರ್ಕಿಸಬೇಕೆಂದು ಈ ಮೂಲಕ ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಲಾಗಿದೆ.

**ಷೆಡ್ಯೂಲ್**

ದಾವಣಗೆರೆ ತಾಲ್ಲೂಕು, ಜಿಲ್ಲೆ ಕುಂದವಾಡ ಗ್ರಾಮದ ರಿ.ಸ. ನಂ: 33 ರಲ್ಲಿ ಎಕರೆ 7.16 ಗುಂಟೆ ಜಮೀನಿನನ್ನು ಹೊಂದಿದ್ದು, ಅದರಲ್ಲಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಮಹಾನಗರಪಾಲಿಕೆಯಲ್ಲಿ ಆಸ್ತಿ ನಂ. 167 ಹಾಗು ಖಾತೆ ನಂ.197 ಎಂದು ಸುಳ್ಳು ನಮೂದು ಮಾಡಿಕೊಂಡಿದ್ದು, ಇದಕ್ಕೆ ಮೂಲ ದಾಖಲೆಗಳಿರುವುದಿಲ್ಲ. ಸದರಿ ಸೊತ್ತಿನ ಚೆಕ್ಕುಬಂದಿ: ಪೂರ್ವಕ್ಕೆ : ಇದೇ ನಂಬರಿನ ಪೈಕಿ ಉಳಿದ ಜಾಗ, ಉತ್ತರಕ್ಕೆ : ರಸ್ತೆ, ಪಶ್ಚಿಮಕ್ಕೆ : ಎ. ವೀರಪ್ಪ ಬಿನ್ ವಿರೂಪಾಕ್ಷಪ್ಪನವರ ಸೊತ್ತು, ದಕ್ಷಿಣಕ್ಕೆ: ಬಸಪ್ಪ ಬಿನ್ ಮಹಾದೇವಪ್ಪನವರ ಸೊತ್ತು
**ವಿಶೇಷ ಸೂಚನೆ :** ಈ ಮೇಲ್ಕಾಣಿಸಿದ ಚೆಕ್ಕುಬಂದಿ ಹೊಂದಿರುವ ಸೊತ್ತು ರಿ.ಸ. ನಂ: 33ರ ವಿಸ್ತೀರ್ಣ, ಎಕರೆ 7.16 ಗುಂಟೆಯನ್ನು ಒಳಗೊಂಡಿರುತ್ತದೆ.

**ದಿನಾಂಕ : 05.03.2022**
**ಸ್ಥಳ : ದಾವಣಗೆರೆ**

**ಬಿ.ಎಸ್. ನಾಗರಾಜ್**, ವಕೀಲರು
1ನೇ ಮಹಡಿ, ಜಾಧವ್ ಬಿಲ್ಡಿಂಗ್, ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ. **ಮೊ: 94812 88018**



RUSHI EDUCATIONAL TRUST (R)
**Rishi Group Of Institutions**
Little Champs Gurukulam, Lower Primary English Medium School
RGI INTRODUCES
**EARLY BIRD ADMISSIONS**
For Academic Year 2022-23



Avail Discount on :
☑ 20% For First 20 Seats only
☑ 10% For Farmers
☑ 30% For Army/Ex. Army
**TEACHERS WANTED**
B.A./ M.A./ B.A., B.ED./ M.A., B.ED./
B.SC./ M.SC./ B.SC., B.ED./M.SC., / B.ED. /
D.ED./ M.C.A. / PHYSICAL INSTRUCTOR./
M.B.A.- ADMINISTRATION / M.B.A.- MARKETING
63614-27533 | 98448-97361
#2697/69, OPP. CHURCH, NEAR RING ROAD CLOCK CIRCLE, S.S LAYOUT, DAVANGERE-577005.



**ವಿದೇಶ ಪ್ರಯಾಣ : ಶುಭ ಹಾರೈಕೆಗಳು**



ನಮ್ಮ ಸಹಕಾರಿ ಮಹಿಳಾ ನಿರ್ದೇಶಕರಾದ
**ಶ್ರೀಮತಿ ಪ್ರೇಮಾ ಜಿ.ಎಂ.**
ಮತ್ತು ಅವರ ಪತಿಯವರಾದ
**ಶ್ರೀ ಮಹೇಶ್ವರಯ್ಯ ಎಸ್.**
ಇವರುಗಳು ದಿನಾಂಕ : 06.03.2022 ರಂದು ಡೆಲ್ಲಾಸ್, ಅಮೇರಿಕಾದಲ್ಲಿರುವ ಅವರ ಮಗಳು, ಅಳಿಯ ಹಾಗೂ ಮೊಮ್ಮಕ್ಕಳನ್ನು ಸೇರಲು ವಿದೇಶಕ್ಕೆ ತೆರಳುತ್ತಿದ್ದು, ಅವರ ಪ್ರಯಾಣವು ಸುಖಕರವಾಗಿರಲೆಂದು ಶುಭ ಕೋರುವವರು...

ಬಸವರಾಜಯ್ಯ ಎನ್.ಎಂ. ಅಧ್ಯಕ್ಷರು | ಇಂದೂಧರ ನಿಶಾನಿಮಠ ಉಪಾಧ್ಯಕ್ಷರು

ನಿರ್ದೇಶಕರುಗಳು : ❖ ಪ್ರೊ॥ ಎಸ್.ಎಂ. ವೀರಯ್ಯ ❖ ಬಕ್ಕೇಶ್ವರಸ್ವಾಮಿ ಕೆ.ಎಂ. ❖ ಜಯದೇವಯ್ಯ ಸಿ.ಎಂ. ❖ ಚಂದ್ರಶೇಖರಯ್ಯ ಬಿ.ಎಂ. ❖ ಡಾ॥ ಎಲ್.ಎಂ. ಜ್ಞಾನೇಶ್ವರ್ ❖ ವೀರಯ್ಯ ಬಸಯ್ಯ ಮಳೀಮಠ್ ❖ ಕಿರಣ್ ಕುಮಾರ್ ಜೆ. ❖ ಶ್ರೀಮತಿ ನಳಿನಾ ಕೆ.ಎಸ್.
ವಿಶೇಷ ಆಹ್ವಾನಿತರು : ❖ ವಿ. ಶಿವಮೂರ್ತಿಸ್ವಾಮಿ ❖ ಶ್ರೀಮತಿ ರಾಜೇಶ್ವರಿ ವೈ.ಎಂ.
ಕಾರ್ಯದರ್ಶಿಗಳು : ಶ್ರೀಮತಿ ಕವಿತಾ ಜೆ.
ಸಿಬ್ಬಂದಿ ವರ್ಗ ಮತ್ತು ಪಿಗ್ಮಿ ಸಂಗ್ರಹಕಾರರು
**ಜಂಗಮ ಸೌಹಾರ್ದ ಸಹಕಾರಿ ನಿ.,**
# 457/2, ಪ್ರಿಯಾ ಕಾಂಪ್ಲೆಕ್ಸ್, 16ನೇ ಕ್ರಾಸ್, ಕೆ.ಟಿ.ಜೆ. ನಗರ ದಾವಣಗೆರೆ.

# ಬಜೆಟ್ : ಪರಿಶಿಷ್ಟ ಜಾತಿ - ಪಂಗಡದವರಿಗೆ ಬಂಪರ್



ಹರಪನಹಳ್ಳಿ, ಮಾ. 5 - ಸಿಎಂ ಬಸವರಾಜ ಬೊಮ್ಮಾಯಿ ಅವರು ಮಂಡಿಸಿರುವ ಬಜೆಟ್ ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ವ್ಯಾಪ್ತಿಗೆ ಬರುವ ಅಭಿವೃದ್ಧಿ ನಿಗಮಗಳ ಯೋಜನೆಗೆ 800 ಕೋಟಿ. ಹಾಗೂ ಸಿಎಸ್‌ಪಿ/ಟಿಎಸ್‌ಪಿ ಗೆ 28.234 ಕೋಟಿ ಹಂಚಿಕೆ ಮಾಡಿರುವುದು ನೋಡಿದರೆ ಪರಿಶಿಷ್ಟ ಜಾತಿ ಪಂಗಡದವರಿಗೆ ಬಂಪರ್ ಕೊಡುಗೆ ನೀಡಿದ್ದಾರೆ ಎಂದು ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ, ಶಾಸಕ ಎಸ್.ವಿ. ರಾಮಚಂದ್ರಪ್ಪ ಹೇಳಿದರು.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಶಿಕ್ಷಣ, ಉದ್ಯೋಗ ಮತ್ತು ಸಬಲೀಕರಣ ಸೇರಿದಂತೆ ರಾಜ್ಯದ ಸರ್ವಾಂಗೀಣ ಪ್ರಗತಿಗೆ ಪೂರಕವಾದ ಬಜೆಟ್ ಆಗಿದೆ. ಕೃಷಿ, ಉದ್ಯೋಗ ಸೃಷ್ಟಿ, ಶಿಕ್ಷಣದ ಬಲವರ್ಧನೆ, ಆರೋಗ್ಯ ಸೇವೆಗಳ ವಿಸ್ತರಣೆಗೆ ವಿಶೇಷ ಒತ್ತು ನೀಡಲಾಗಿದೆ ಎಂದು.

ದಾವಣಗೆರೆ ಜಿಲ್ಲೆಗೆ ಪ್ರತ್ಯೇಕ ಹಾಲು ಒಕ್ಕೂಟ, ಕಾರ್ಮಿಕ ರಾಜ್ಯ ಆಸ್ಪತ್ರೆಗಳ 50 ರಿಂದ ನೂರಕ್ಕೆ ಹಾಸಿಗೆಗಳ ಸಾಮರ್ಥ್ಯ ಹೆಚ್ಚಳ ಮಾಡಿರುವುದು ಸ್ವಾಗತಾರ್ಹ. ತಳಸ್ಥರ, ದುರ್ಬಲ, ಹಿಂದುಳಿದ ಸಮುದಾಯಗಳ ಸರ್ವತೋಮುಖ ಅಭಿವೃದ್ಧಿಗೆ ಒತ್ತು, ರಾಜ್ಯದ ಅಭಿವೃದ್ಧಿಗೆ ಸರ್ಕಾರದ ಪಂಚಸೂತ್ರಗಳಲ್ಲಿ ಒಂದಾದ ದುರ್ಬಲ ವರ್ಗದವರ ರಕ್ಷಣೆ, ಸಬಲೀಕರಣ ಮತ್ತು ಸ್ವಾಭಿಮಾನದ ಬದುಕು ಕಟ್ಟಿಕೊಡುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇಟ್ಟಿದ್ದಾರೆ ಎಂದರು.

# ಹರಿಹರ-ಹೊಸಪೇಟೆ ಮಾರ್ಗದಲ್ಲಿ ಇಂದು ವಿದ್ಯುತ್ ವ್ಯತ್ಯಯ

11 ಕೆ.ವಿ ಎಫ್-1 ಮಾಕನೂರು ಐಪಿ, ಎಫ್-2 ರಾಮ್ಕೋ, ಎಫ್-3 ನದಿಹರಳಹಳ್ಳಿ, ಎಫ್-4 ಕೋಡಿಯಾಲ, ಎಫ್-11 ಸಿಂಥೈಟಿ, ಎಫ್-13 W/S ಹರಿಹರ ಮತ್ತು ಎಫ್-12 ಹುಲಿಕಟ್ಟಿ ವಿದ್ಯುತ್ ಮಾರ್ಗಗಳ ಮೇಲೆ ಬರುವ ನಲವಾಗಲ, ಕೋಡಿಯಾಲ, ಮಾಕನೂರು ಮತ್ತು ಕವಲೆತ್ತು ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

# ಸಂಗೀತ ಪ್ರಿಯರ ಹೃದಯ ಗೆದ್ದ 'ಗಾತ ರಹೇ ಮೇರಾ ದಿಲ್'

## ಸಂಗೀತದಿಂದ ನವಚೈತನ್ಯ: ಎಸ್ಸೆಸ್



ದಾವಣಗೆರೆ, ಮಾ.5- ಸಿನಿಮಾ ಸಿರಿ ಸಂಸ್ಥೆ ವತಿಯಿಂದ ಗಾನಕೋಗಿಲೆ ಲತಾ ಮಂಗೇಶ್ಕರ್ ಇವರ ಸ್ಮರಣಾರ್ಥ ನಗರದ ಶ್ರೀ ಶಿವಯೋಗ ಮಂದಿರದಲ್ಲಿ ಇಂದು ಸಂಜೆ ಹಮ್ಮಿಕೊಳ್ಳಲಾಗಿದ್ದ 'ಗಾತ ರಹೇ ಮೇರಾ ದಿಲ್' ಸಂಗೀತ ಸಂಜೆ ಕಾರ್ಯಕ್ರಮವು ಸಂಗೀತಾಸಕ್ತರ ಮನ ಗೆಲ್ಲುವಲ್ಲಿ ಯಶಸ್ವಿಯಾಯಿತು.

ಗಾಯಕಿ ರಕ್ಷ ಸರಳಾಯ ಅವರು 'ಸತ್ಯಂ ಶಿವಂ ಸುಂದರಂ' ಹಾಡಿನ ಮೂಲಕ ಸಂಗೀತ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಸಂಗೀತಾ ರಾಘವೇಂದ್ರ ಹಾಡಿದ 'ಹೇ ಮೇರೆ ವತನ್ ಕೇ ಲೋಗೋ' ಹಾಡು ದೇಶ ಭಕ್ತಿ ಬಡಿದೆಬ್ಬಿಸುವಂತಿತ್ತು.

ಟಿ.ಶೋಭ, ಎಂ.ಜಿ. ಜಗದೀಶ್, ಆರ್.ಟಿ. ಮೃತ್ಯುಂಜಯ, ಅಮಿತ್ ಶೇಖರ್ ಅವರುಗಳ ಹಾಡುಗಳಿಗೆ ಕೇಳುಗರು ತಲೆ ತೂಗಿದರು. ಆರಂಭದಿಂದ ಕಾರ್ಯಕ್ರಮ ಅಂತ್ಯದವರೆಗೂ ಶ್ರೋತೃಗಳನ್ನು ಹಿಡಿದಿಟ್ಟುಕೊಳ್ಳುವಲ್ಲಿ ಗಾಯಕರು ಯಶಸ್ವಿಯಾದರು.

ಆರಂಭದಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿದ ಶಾಸಕ ಶಾಮನೂರು ಶಿವಶಂಕರಪ್ಪ ಅವರು, ತಾವೂ ಸಹ ಲತಾ ಮಂಗೇಶ್ಕರ್ ಅವರ ಅಭಿಮಾನಿ ಎಂದರು.

ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿಯವರೂ ಸಹ ಹಾಡುಗಳನ್ನು ಕೇಳಿ ತಲೆತೂಗಿದರು. ಶ್ರೀಗಳ ಅಭಿಲಾಷೆಯಂತೆ ಮತ್ತೊಮ್ಮೆ ಸತ್ಯಂ ಶಿವಂ ಸುಂದರಂ ಹಾಡು ಹಾಡಲಾಯಿತು.

ಸಿನಿಮಾ ಸಿರಿ ಅಧ್ಯಕ್ಷ ಟಿ.ಎಂ. ಪಂಚಾಕ್ಷರಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪರಿಕಲ್ಪನಾ ನಿರ್ದೇಶಕ ಸುರಭಿ ಶಿವಮೂರ್ತಿ ಲತಾ ಮಂಗೇಶ್ಕರ್ ಅವರ ಕುರಿತು ಮಾತನಾಡಿದರು. ಖಜಾಂಚಿ ಹೆಚ್.ವಿ. ಮಂಜುನಾಥ ಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

ಪ್ರಧಾನ ಕಾರ್ಯದರ್ಶಿ ಎಂ.ಜಿ. ಜಗದೀಶ್, ಉಪಾಧ್ಯಕ್ಷ ಅಂದನೂರು ಮುಪ್ಪಣ್ಣ, ಸಂಪರ್ಕ ಸಹಕಾರ ಕಾರ್ಯದರ್ಶಿ ಸಾಲಿಗ್ರಾಮ ಗಣೇಶ್ ಶೆಣೈ, ಸಹ ಕಾರ್ಯದರ್ಶಿ ಈಶ್ವರಿ ಶಿವಕುಮಾರ್ ಇತರರು ಉಪಸ್ಥಿತರಿದ್ದರು.

# ನವೀನ್ ಕುಟುಂಬಕ್ಕೆ ಶರಣರ ಸಾಂತ್ವನ



ಚಿತ್ರದುರ್ಗ ಮಾ. 5 - ಉಕ್ರೇನ್‌ನಲ್ಲಿ ರಷ್ಯಾ ದಾಳಿಯಿಂದ ಸಾವಿಗೀಡಾಗಿರುವ ನವೀನ್ ಅವರ ಚಳಗೇರಿಯ ಮನೆಗೆ ಡಾ. ಶಿವಮೂರ್ತಿ ಮುರುಘಾ ಶರಣರು ತೆರಳಿ, ಅವರ ತಂದೆ-ತಾಯಿ ಮತ್ತು ಕುಟುಂಬ ವರ್ಗದವರಿಗೆ ಸಾಂತ್ವನ ಹೇಳಿದರಲ್ಲದೇ, 25 ಸಾವಿರ ರೂ.ಗಳ ನೆರವು ನೀಡಿದರು. ಈ ಸಂದರ್ಭದಲ್ಲಿ ಹಾವೇರಿ ಹೊಸಮಠದ ಶ್ರೀ ಬಸವ ಶಾಂತಲಿಂಗ ಸ್ವಾಮೀಜಿ, ರಾಣೇಬೆನ್ನೂರು ವಿರಕ್ತ ಮಠದ ಶ್ರೀ ಗುರುಬಸವ ಸ್ವಾಮಿಗಳು ಉಪಸ್ಥಿತರಿದ್ದರು.

# ವಾಹನಗಳ ವಿಮೆ ಕಂತು ಹೆಚ್ಚಳ

ನವದೆಹಲಿ, ಮಾ. 5 – ಬರುವ ಏಪ್ರಿಲ್ 1ರಿಂದ ಮೂರನೇ ಪಾರ್ಟಿಯ ಮೋಟಾರು ವಿಮೆ ಕಂತಿನ ಪ್ರಮಾಣ ಹೆಚ್ಚಿಸಲು ಕೇಂದ್ರ ಸಾರಿಗೆ ಸಚಿವಾಲಯ ಪ್ರಸ್ತಾಪಿಸಿದೆ. ಇದರಿಂದಾಗಿ ಕಾರು ಹಾಗೂ ದ್ವಿಚಕ್ರ ವಾಹನಗಳ ವಿಮೆ ಮೊತ್ತ ಹೆಚ್ಚಾಗಲಿದೆ. ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ವಿಮೆ ಕಂತು ಹೆಚ್ಚಿಸಿರಲಿಲ್ಲ. ಹೊಸ ದರಗಳು ಏಪ್ರಿಲ್ 1ರಿಂದ ಜಾರಿಗೆ ಬರಲಿವೆ.

ಎಲೆಕ್ಟ್ರಿಕ್ ವಾಹನಗಳಿಗೆ ವಿನಾಯಿತಿ ನೀಡಲೂ ಸಹ ಸರ್ಕಾರ ಪ್ರಸ್ತಾಪಿಸಿದೆ.

# ಲೈಟ್ ಬೂಸ್ಟರ್ ಬಳಕೆ : ಅನುಮತಿ

ನವದೆಹಲಿ, ಮಾ. 5 – ಸ್ಪುಟ್ನಿಕ್ ಲೈಟ್ ಲಸಿಕೆಯನ್ನು ಬೂಸ್ಟರ್ ಡೋಸ್ ಆಗಿ ಬಳಸುವ ಬಗ್ಗೆ ಮೂರನೇ ಹಂತದ ಪ್ರಯೋಗ ನಡೆಸಲು ಕೇಂದ್ರ ಔಷಧ ಪ್ರಾಧಿಕಾರದ ಪರಿಣಿತರ ಸಮಿತಿ ಒಪ್ಪಿಗೆ ನೀಡಿದೆ.

ಅಂತಿಮ ಒಪ್ಪಿಗೆಗಾಗಿ ಈ ಕುರಿತ ಶಿಫಾರಸ್ಸನ್ನು ಔಷಧ ನಿಯಂತ್ರಕ ಡಿ.ಸಿ.ಜಿ.ಐ.ಗೆ ಕಳಿಸಲಾಗಿದೆ. ಸ್ಪೇಟನ್ ಲೈಟ್ ಲಸಿಕೆಯನ್ನು ಭಾರತದಲ್ಲಿ ಬಳಸಲು ಫೆಬ್ರವರಿ 4ರಂದು ಡಿ.ಸಿ.ಜಿ.ಐ. ಅನುಮತಿ ನೀಡಿತ್ತು.

# ಶಿಸ್ತು - ಸಂಸ್ಕೃತಿ ಉಳಿಸಿ, ಬೆಳೆಸುತ್ತಿರುವ ಬಿಜೆಪಿ

## ಹರಪನಹಳ್ಳಿಯ ಬಿಜೆಪಿಯ ಕಾರ್ಯಕ್ರಮದಲ್ಲಿ ಸಚಿವೆ ಶಶಿಕಲಾ ಜೊಲ್ಲೆ ಶ್ಲಾಘನೆ



ಹರಪನಹಳ್ಳಿ, ಮಾ.5- ಎಲ್ಲಾ ರಾಷ್ಟ್ರೀಯ ಪಕ್ಷಗಳಿಗಿಂತ ಬಿಜೆಪಿ ವಿಭಿನ್ನ ಪಕ್ಷವಾಗಿದ್ದು, ಶಿಸ್ತು - ಸಂಸ್ಕೃತಿ, ರಾಷ್ಟ್ರಪ್ರೇಮ ವನ್ನು ಉಳಿಸಿ, ಬೆಳೆಸಿ ಕೊಂಡು ಬಂದಿದೆ. ಜನಸಂಘದಿಂದ ಪ್ರಾರಂಭವಾದ ಬಿಜೆಪಿ ಇಲ್ಲಿಯ ವರೆಗೂ ತನ್ನ ತತ್ವ-ಸಿದ್ಧಾಂತ, ಸಂಸ್ಕೃತಿ, ರಾಷ್ಟ್ರ ರಕ್ಷಣೆ ವಿಚಾರದಲ್ಲಿ ಬದ್ಧತೆ ಉಳಿಸಿಕೊಂಡು ಬಂದಿದೆ ಎಂದು ವಿಜಯನಗರ ಜಿಲ್ಲಾ ಉಸ್ತುವಾರಿ ಹಾಗೂ ಮುಜರಾಯಿ ಇಲಾಖೆ ಸಚಿವರಾದ ಶ್ರೀಮತಿ ಶಶಿಕಲಾ ಜೊಲ್ಲೆ ಹೇಳಿದರು.

ಪಟ್ಟಣದ ಹೊರ ವಲಯದಲ್ಲಿರುವ ಸಮತಾ ರೆಸಾರ್ಟ್‌ನ ಸಭಾಂಗಣದಲ್ಲಿ ಬಿಜೆಪಿ ಹಮ್ಮಿಕೊಂಡಿರುವ ಮೂರು ದಿನಗಳ ಜಿಲ್ಲಾ ಪ್ರಶಿಕ್ಷಣ ವರ್ಗ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಶಿಕ್ಷಣ ವರ್ಗ ತರಬೇತಿಯಲ್ಲಿ ಬಿಜೆಪಿ ಪಕ್ಷದ ಪದಾಧಿಕಾರಿಗಳು ಭಾಗವಹಿಸಿ, ಪರಸ್ಪರ ಪರಿಚಯ, ವಿಚಾರ ವಿನಿಮಯ, ಪಕ್ಷದ ಇತಿಹಾಸವನ್ನು ತಿಳಿದುಕೊಂಡು ಪಕ್ಷದ ಉಳಿದ ಕಾರ್ಯಕರ್ತರಿಗೆ ತಿಳಿಸುವ ಮೂಲಕ ಬೂತ್ ಮಟ್ಟದಲ್ಲಿ ಪಕ್ಷ ಸಂಘಟನೆಗೆ ಒತ್ತು ನೀಡಬೇಕೆಂದು ಕರೆ ನೀಡಿದರು.

ಶಾಸಕ ಜಿ.ಕರುಣಾಕರ ರೆಡ್ಡಿ ಮಾತನಾಡಿ, ಸಂಘಟನೆ, ಹೋರಾಟದ ಮೂಲಕ ಬಿಜೆಪಿ ಬೆಳೆದು ಬಂದಿದ್ದು, ನರೇಂದ್ರ ಮೋದಿಯವರು ಪ್ರಧಾನಿಯಾದ ಮೇಲೆ ಜಗತ್ತಿನಲ್ಲಿಯೇ ಭಾರತದ ಬಗ್ಗೆ ಗೌರವ ಹೆಚ್ಚಾಗುತ್ತಿದೆ. ಮೋದಿಯವರು ಪ್ರಧಾನಿಯಾಗುವುದಕ್ಕಿಂತ ಮುಂಚೆ ಅಮೇರಿಕಾ ಅವರಿಗೆ ವಿಸಾ ನಿರಾಕರಿಸಿತ್ತು, ಪ್ರಧಾನಿಯಾದ ನಂತರ ಕೆಂಪು ರತ್ನಗಂಬಳಿ ಮೂಲಕ ಮೋದಿಯವರನ್ನು ಸ್ವಾಗತ ಮಾಡಿದ್ದನ್ನು ನಾವ್ಯಾರೂ ಮರೆಯುವಂತಿಲ್ಲ ಎಂದು ಸ್ಮರಿಸಿದರು.

ವಿಧಾನ ಪರಿಷತ್ ಸದಸ್ಯ ವೈ.ಎಂ.ಸತೀಶ್ ಮಾತನಾಡಿ, ಪಕ್ಷದ ಕಾರ್ಯಕರ್ತರು ಒಗ್ಗಟ್ಟಾಗಿ ಕೆಲಸ ಮಾಡಿದರೆ ಮುಂದಿನ ದಿನಗಳಲ್ಲಿ ಪಕ್ಷವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಬಹುದು ಎಂದು ಹೇಳಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್ ಮಾತನಾಡಿದರು. ಬಿಜೆಪಿ ಜಿಲ್ಲಾ ಮುಖಂಡ ಡಾ.ರಮೇಶ್ ನಿರೂಪಿಸಿದರು. ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷರಾದ ಆರುಂಡಿ ಸುವರ್ಣ ಸ್ವಾಗತಿಸಿದರು.

ಕಾರ್ಯಕ್ರಮದ ಪೂರ್ವದಲ್ಲಿ ಸಚಿವರಾದ ಶಶಿಕಲಾ ಜೊಲ್ಲೆಯವರು ಗೋ ಮಾತೆಗೆ ಪೂಜೆ ಸಲ್ಲಿಸಿದರು.

ಈ ವೇಳೆ ಆರ್‌ಎಸ್‌ಎಸ್ ರಾಜ್ಯ ಮುಖಂಡ ಅರುಣ್, ವಿಭಾಗ ಪ್ರಭಾರಿ ಚಂದ್ರಶೇಖರ್ ಹಂಗೇರಿ, ಸುರೇಂದ್ರ ಮಂಚಾಲಿ, ಬಿಜೆಪಿ ತಾಲ್ಲೂಕು ಅಧ್ಯಕ್ಷ ಸತ್ತೂರು ಹಾಲೇಶ್, ಪುರಸಭೆ ಅಧ್ಯಕ್ಷ ಮಂಜುನಾಥ್ ಇಜಂತ್‌ಕರ್, ಉಪಾಧ್ಯಕ್ಷರಾದ ನಿಟ್ಟೂರು ಭೀಮವ್ವ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಜಯಶೀಲ ಕೆ.ಆರ್, ಮುಖಂಡರಾದ ಜಿ.ನಂಜನಗೌಡ, ಆರುಂಡಿ ನಾಗರಾಜ್, ಕಲ್ಲೇರ್ ಬಸವರಾಜಪ್ಪ, ಬಾಗಳಿ ಕೊಟ್ರೇಶಪ್ಪ, ಎಂ.ಪಿ.ನಾಯ್ಕ್, ದಾದಾಪುರ ಶಿವಾನಂದ, ರಂಗಾಪರ ಪಕ್ಕೀರಪ್ಪ, ಕಣಿವಿಹಳ್ಳಿ ಮಂಜುನಾಥ್, ಎಲ್.ಮಂಜ್ಯಾನಾಯ್ಕ್, ಎಸ್. ಬಿ.ಲಿಂಬ್ಯಾನಾಯ್ಕ್, ಬಿ.ವೈ.ವೆಂಕಟೇಶ್, ಎಂ.ಮಲ್ಲೇಶ್, ರಾಘವೇಂದ್ರ ಶೆಟ್ಟಿ, ಎಂ. ಸಂತೋಷ, ಯು.ಪಿ. ನಾಗರಾಜ ಸೇರಿದಂತೆ ಇತರರಿದ್ದರು.



## ನಂದಿತಾವರೆಯಲ್ಲಿ ರಥೋತ್ಸವ

ಮಲೇಬೆನ್ನೂರು ಸಮೀಪದ ನಂದಿತಾವರೆ ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿಯ ಮಹಾರಥೋತ್ಸವವು ಶನಿವಾರ ತಡರಾತ್ರಿ ಸಂಭ್ರಮದಿಂದ ಜರುಗಿತು.

# ಬಿ.ಟಿ. ಸಿದ್ದಪ್ಪಗೆ ಗೌರವ ಡಾಕ್ಟರೇಟ್



ದಾವಣಗೆರೆ, ಮಾ.5- ಇಂಡಿಯನ್ ಎಂಪೈರ್ ವಿಶ್ವವಿದ್ಯಾಲಯವು ಸಾಮಾಜಿಕ ಸೇವೆಗಾಗಿ ರಾಷ್ಟ್ರೀಯ ಗೋ ಸೇವಾ ಸಂಘದ ರಾಜ್ಯ ಘಟಕದ ಅಧ್ಯಕ್ಷರೂ, ತಿರುಪತಿ ತಿರುಮಲ ದಾಸ ಸಾಹಿತ್ಯ ಪ್ರಾಜೆಕ್ಟ್ ಜಿಲ್ಲಾಧ್ಯಕ್ಷರೂ ಆದ ಬಿ.ಟಿ. ಸಿದ್ದಪ್ಪ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.

ಹೊಸೂರಿನಲ್ಲಿ ನಿನ್ನೆ ನಡೆದ ಇಂಡಿಯನ್ ಎಂಪೈರ್ ವಿಶ್ವವಿದ್ಯಾಲಯದ ಕಾರ್ಯಕ್ರಮದಲ್ಲಿ ಸಿದ್ದಪ್ಪ ಅವರಿಗೆ ಈ ಗೌರವ ಪ್ರದಾನ ಮಾಡಲಾಯಿತು.

# ನಗರಕ್ಕಾಗಮಿಸಿದ ಸಿಬ್ಬಂದಿ ವೇತನ ಅನುದಾನ ಜಾರಿಯ ಪಾದಯಾತ್ರೆ



ದಾವಣಗೆರೆ, ಮಾ.5- ವಿದ್ಯಾರ್ಥಿ ಕೇಂದ್ರೀಕೃತ ಅನುದಾನ ರದ್ದುಪಡಿಸಿ, ಹಿಂದಿನ ಸಿಬ್ಬಂದಿ ವೇತನ ಅನುದಾನ ಜಾರಿಗೆ ಒತ್ತಾಯಿಸಿ, ಹುಬ್ಬಳ್ಳಿಯಿಂದ ಬೆಂಗಳೂರಿನವರೆಗೆ ಹಮ್ಮಿಕೊಂಡಿರುವ ಪಾದಯಾತ್ರೆಯು ಇಂದು ನಗರಕ್ಕಾಗಮಿಸಿತು.

ಜಯದೇವ ವೃತ್ತದಲ್ಲಿ ಕರ್ನಾಟಕ ರಾಜ್ಯ ಖಾಸಗಿ ಐಟಿಐ ಸಂಘಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಬಸವರಾಜ ಸಾಗರ್ ಸೇರಿದಂತೆ, ಪದಾಧಿಕಾರಿಗಳು ಈ ಪಾದಯಾತ್ರಿಗಳನ್ನು ಸ್ವಾಗತಿಸಿದರು.

ನಂತರ ನಡೆದ ಸಭೆಯಲ್ಲಿ ಒಕ್ಕೂಟದ ರಾಜ್ಯ ಸಂಚಾಲಕ ಲೋಹಿತ್ ಕುಂಬಾರ್ ಮಾತನಾಡಿ, ಅನೇಕ ವರ್ಷಗಳಿಂದಲೂ ಖಾಸಗಿ ಐಟಿಐಗಳು ಸಾಕಷ್ಟು ಸಮಸ್ಯೆ, ಸಂಕಷ್ಟಗಳನ್ನು ಎದುರಿಸುತ್ತಿವೆ. ಸರ್ಕಾರದ ನಿಯಮಾವಳಿಗಳು ಖಾಸಗಿ ಐಟಿಐ ಕಾಲೇಜುಗಳನ್ನು ಮುಚ್ಚಿಸುವ ಹುನ್ನಾರದಂತೆ ಭಾಸವಾಗುತ್ತಿವೆ. ಸಂಯೋಜನೆ ಹೊಂದಿ 10-15 ವರ್ಷ ಕಳೆದರೂ ನಮ್ಮ ಶೈಕ್ಷಣಿಕ ಸೇವೆ ಪರಿಗಣಿಸಿ ಸರ್ಕಾರ ಯಾವುದೇ ಸಹಾಯಾನುದಾನ ನೀಡಲು ಮುಂದಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹುಬ್ಬಳ್ಳಿಯಿಂದ ಮಾ.1ರಂದು ಆರಂಭವಾದ ನಮ್ಮ ಪಾದಯಾತ್ರೆ ಬೆಂಗಳೂರಿನತ್ತ ಸಾಗುತ್ತಿದೆ. ಸರ್ಕಾರವು ನಮ್ಮ ಬೇಡಿಕೆಗಳ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಈಡೇರಿಸದಿದ್ದರೆ ಬೆಂಗಳೂರನ್ನು ನಮ್ಮ ಪಾದಯಾತ್ರೆ ತಲುಪಿದ ನಂತರ ಮತ್ತೆ ರಾಜಧಾನಿಯಲ್ಲೇ ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಆರಂಭಿಸಲಿದ್ದೇವೆ. ನಮ್ಮ ಬೇಡಿಕೆಗಳನ್ನು ಈಡೇರಿಸುವವರೆಗೆ ಹೋರಾಟದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದರು.

ಒಕ್ಕೂಟದ ಸಹ ಸಂಚಾಲಕ ಸುರೇಶ ಪಲ್ಲೇದ, ರಮೇಶ ಗೌಡ ಪಾಟೀಲ್, ಜಿಲ್ಲಾಧ್ಯಕ್ಷ ಬಸವರಾಜ ಸಾಗರ್, ಮುಖಂಡರಾದ ಎನ್. ಸಿ.ನಿಜಗುಣ, ಫಜ್ಲು ರೆಹಮಾನ್, ಎಂ. ಕೆಂಚಮೂರ್ತಿ, ಹನುಮಂತರಾವ್ ಸಿಂಧೆ, ಚೈತನ್ಯಕುಮಾರ, ಹಾಲೇಶ ಮಾಳಗಿ, ಮಲ್ಲಿಕಾರ್ಜುನ ಸೇರಿದಂತೆ ಇತರರು ಇದ್ದರು.

# ಬ್ರಹ್ಮೋಸ್ ಕ್ಷಿಪಣಿ ಪರೀಕ್ಷೆ ಯಶಸ್ವಿ

ನವದೆಹಲಿ ಮಾ. 5 – ಭಾರತೀಯ ನೌಕಾ ದಳ ಶನಿವಾರದಂದು ಬ್ರಹ್ಮೋಸ್‌ನ ಆಧುನಿಕ ಮಾದರಿಯ ಕ್ಷಿಪಣಿಯ ಯಶಸ್ವಿ ಪರೀಕ್ಷೆ ನಡೆಸಿದೆ.

ಕ್ಷಿಪಣಿ ಅತ್ಯಂತ ನಿಖರವಾಗಿ ತನ್ನ ಗುರಿ ತಲುಪಿದೆ ಎಂದು ನೌಕಾ ದಳದ ವಕ್ತಾರರು ಹೇಳಿದ್ದಾರೆ. ಬ್ರಹ್ಮೋಸ್ ಕ್ಷಿಪಣಿಯನ್ನು ಭಾರತ ಹಾಗೂ ರಷ್ಯಾ ಜಂಟಿ ಉದ್ಯಮ ಉತ್ಪಾದಿಸುತ್ತಿದೆ.

# ರಷ್ಯಾ ಸಿರಿವಂತ ಆಸ್ತಿ ವಶಪಡಿಸಿಕೊಂಡ ಇಟಲಿ, ಫ್ರಾನ್ಸ್

ಮಿಲನ್, ಮಾ. 5 – ಉಕ್ರೇನ್ ಮೇಲೆ ರಷ್ಯಾ ದಾಳಿ ನಡೆಸಿರುವ ಹಿನ್ನೆಲೆಯಲ್ಲಿ, ಆ ದೇಶದ ಮೇಲೆ ಒತ್ತಡ ತರಲು ಶ್ರೀಮಂತರ ಐಷಾರಾಮಿ ಆಸ್ತಿಗಳನ್ನು ವಶಪಡಿಸಿಕೊಳ್ಳುವ ಕ್ರಮಕ್ಕೆ ಇಟಲಿ ಮುಂದಾಗಿದೆ.

ಶುಕ್ರವಾರದ ನಂತರ 143 ದಶಲಕ್ಷ ಯೂರೋ ಮೌಲ್ಯದ ಐಷಾರಾಮಿ ದೋಣಿ ಹಾಗೂ ಬಂಗಲೆಗಳನ್ನು ವಶಪಡಿಸಿಕೊಂಡಿದೆ. ಈ ಆಸ್ತಿಗಳು ಸರ್ಡಿನಿಯ, ಲಿ ಲಿಗುರಿಯನ್ ಕರಾವಳಿ ಹಾಗೂ ಲೇಕ್ ಕೊಮೊಗಳಲ್ಲಿವೆ.

ಈ ಬಗ್ಗೆ ಹೇಳಿಕೆ ನೀಡಿರುವ ಇಟಲಿ ವಿದೇಶಾಂಗ ಸಚಿವ ಲ್ಯೂಗಿ ಡಿ ಮೈಯೊ, ರಷ್ಯಾದ ಅಧ್ಯಕ್ಷ ವ್ಲಾಡಿ ಮಿರ್ ಪುತಿನ್ ನಿಕಟವರ್ತಿಗಳಾಗಿರುವ ಶ್ರೀಮಂತರ ಆಸ್ತಿಗಳನ್ನು ವಶಪಡಿಸಿಕೊಳ್ಳುವುದಾಗಿ ಹೇಳಿದ್ದಾರೆ. ಪುತಿನ್ ತಮ್ಮ ಹಣವನ್ನು ನಿಕಟವರ್ತಿ ಶ್ರೀಮಂತರ ಬಳಿ ಇರಿಸಿದ್ದಾರೆ ಎಂದು ಲಂಡನ್‌ನ ಹೂಡಿಕೆದಾರ ಹಾಗೂ ಮಾನವ ಹಕ್ಕುಗಳ ಕಾರ್ಯಕರ್ತ ವಿಲಿಯಂ ಬ್ರೌಡರ್ ಹೇಳಿದ್ದಾರೆ.

ಫ್ರಾನ್ಸ್ ಅಧಿಕಾರಿಗಳು ಪುತಿನ್ ಸಹವರ್ತಿ ಐಗೊರ್ ಸೆಚಿನ್ ಅವರಿಗೆ ಸೇರಿದ ಐಷಾರಾಮಿ ಹಡಗೊಂದನ್ನು ವಶಪಡಿಸಿಕೊಂಡಿದ್ದಾರೆ.

ಬ್ರಿಟನ್ ಹಿಂದಿನಿಂದಲೂ ರಷ್ಯಾ ಶ್ರೀಮಂತರ ತಾಣವಾಗಿದೆ. ಇಲ್ಲಿರುವ ಪುತಿನ್ ನಿಕಟವರ್ತಿ ರೊಮನ್ ಅಬ್ರಮೊವಿಚ್ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಬ್ರಿಟನ್ ಮೇಲೆ ಒತ್ತಡ ಹೆಚ್ಚಾಗುತ್ತಿದೆ.

# ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ

ಶಿರಮಗೊಂಡನಹಳ್ಳಿ, ನಾಗನೂರು, ಹೊಸ ಬಿಸಿಲೇರಿ, ಹಳೇ ಬಿಸಿಲೇರಿ, 6ನೇ ಕಲ್ಲು, 7 ನೇ ಕಲ್ಲು ಮತ್ತು ಬನಶಂಕರಿ ಬಡಾವಣೆ 2 ನೇ ಹಂತ, ಜರೀಕಟ್ಟೆ ಮತ್ತು ಮುದಹದಡಿ, ಜೆ.ಹೆಚ್.ಪಟೇಲ್ ನಗರ, ಡಾಲರ್ಸ್ ಕಾಲೋನಿ ಹಾಗೂ ಹೊಸ ಕುಂದವಾಡ, ಹಳೇ ಕುಂದವಾಡ ಮತ್ತು ಸುತ್ತ ಮುತ್ತ ಗ್ರಾಮಗಳು. ಹದಡಿ, ಜವಳಘಟ್ಟ, ಕುಕ್ಕವಾಡ, ಲೋಕಿಕೆರೆ, ಶ್ಯಾಗಲೆ, ಕನಗೊಂಡನಹಳ್ಳಿ, ಆಂಜನೇಯ ನಗರ ಹಾಗೂ ಸುತ್ತಮುತ್ತ ಗ್ರಾಮಗಳಲ್ಲಿ ಇಂದು ಮತ್ತು ನಾಡಿದ್ದು ದಿನಾಂಕ 8 ರಂದು ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಿಲಿದೆ.

JUPITER SOLAR




Glass Lined
Solar Water Heater
(Suitable for all types of water)
FOR ENQUIRY: 63639 85636
WANTED For Dealers

|| ಅಹೋಬಲ ಶ್ರೀ ಲಕ್ಷ್ಮಿನರಸಿಂಹ ಸ್ವಾಮಿ ಪ್ರಸನ್ನ ||

ಕೈಲಾಸ ಸಮಾರಾಧನೆ ಆಹ್ವಾನ



ದಾವಣಗೆರೆ ನಗರ ವಾಸಿಯಾದ
ಶ್ರೀಮತಿ ಮಂಜುಳ ಕೋಂ
ದಿ|| ಹೆಚ್. ಮಂಜುನಾಥ್
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 25.02.2022ರ
ರಾತ್ರಿ 10.30 ಗಂಟೆಯ ಸಮಯದಲ್ಲಿ
ನನ್ನ ಪೂಜ್ಯ ಪತಿಯವರಾದ
ಹೆಚ್. ಮಂಜುನಾಥ್‌ರವರು
ದೈವಾಧೀನರಾದ ಪ್ರಯುಕ್ತ
ಮೃತರ ಆತ್ಮಶಾಂತಿಗಾಗಿ
"ಕೈಲಾಸ ಸಮಾರಾಧನೆ"ಯನ್ನು
ದಿನಾಂಕ : 06.03.2022ರ ಭಾನುವಾರ ಮಧ್ಯಾಹ್ನ : 12.00 ರಿಂದ
ಸ್ಥಳ : #3307/2 ಎಂ. ಎಂ.ಸಿ.ಸಿ. ಬಿ ಬ್ಲಾಕ್, ಶಂಕರ್ ಲೀಲಾ ಗ್ಯಾಸ್ ಏಜೆನ್ಸಿ ಎದುರು, ದಾವಣಗೆರೆ. ಇಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತ ಕುಟುಂಬ ವರ್ಗ :
ಶ್ರೀಮತಿ ಮಂಜುಳ ಮತ್ತು ಮಕ್ಕಳು, ಸೊಸೆಯಂದಿರು ಹಾಗೂ ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗದವರು, ದಾವಣಗೆರೆ.
ಫೋ. : 78999 32008, 94491 85645, 99975 21817
ವಿ.ಸೂ : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

ವೈವಾಹಿಕ ಬೆಳ್ಳಿ ಮಹೋತ್ಸವ - ಶುಭ ಹಾರೈಕೆ



HAPPY ANNIVERSARY 25th HAPPY ANNIVERSARY

ತಮ್ಮ ಜೀವನದ ಸಾರ್ಥಕ 24 ವಸಂತಗಳನ್ನು ಪೂರೈಸಿ 25ನೇ ವಸಂತಕ್ಕೆ ಪಾದಾರ್ಪಣೆ ಮಾಡಿ ಇಂದು ವೈವಾಹಿಕ ಬೆಳ್ಳಿ ಮಹೋತ್ಸವ ಆಚರಿಸಿಕೊಳ್ಳುತ್ತಿರುವ ಆತ್ಮೀಯ ಸ್ನೇಹಿತರಾದ
ಶ್ರೀ ಹೆಚ್.ಎಂ. ನಾಗರಾಜ್ ಮತ್ತು ಶ್ರೀಮತಿ ಶಶಿಕಲಾ
ದಂಪತಿಗಳಿಗೆ ಹಾರ್ದಿಕ ಶುಭಾಶಯಗಳು. ಭಗವಂತನು ಅವರಿಗೆ ಆಯುರಾರೋಗ್ಯ- ಐಶ್ವರ್ಯ ಸುಖ - ಶಾಂತಿ - ನೆಮ್ಮದಿ ನೀಡಲೆಂದು ಶುಭ ಹಾರೈಸುತ್ತೇವೆ.

* ಕೆ.ಜಿ. ಕರಿಬಸಪ್ಪ– ಶ್ರೀ ಪ್ರಭುದೇವ ಗನ್ನಿ ಮರ್ಚೆಂಟ್
* ಅಮರೇಶ ಗಟ್ಟಿಗನೂರು, ಜಮೀನುದಾರರು
* ಶೇಖರ್ – ಅನುಷಾ ಗನ್ನಿ ಮರ್ಚೆಂಟ್
* ಪಿ.ಡಿ. ವಸಂತ– ಪಿ.ದುಗ್ಗಪ್ಪ ಗನ್ನಿ ಪ್ರಾಡಕ್ಟ್, ಹರಿಹರ.
* ಬಸವರಾಜ್ ಗ್ಯಾರೇಜ್

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte